## ನಿಗಮದಡಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಸ್ತುಸ್ಥಿತಿ ಸೆಪ್ಟೆಂಬರ್-2020ರ ಅಂತ್ಯಕ್ಕೆ

### 1. ಘಟಪ್ರಭಾ ಯೋಜನೆ:

ಘಟಪ್ರಭಾ ಯೋಜನೆಯಡಿ ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಯಭಾಗ, ರಾಮದುರ್ಗ, ಸವದತ್ತಿ, ಬದಾಮಿ, ಬಾಗಲಕೋಟ, ಬೀಳಗಿ, ಹುನಗುಂದ, ಜಮಖಂಡಿ, ಮುಧೋಳ ತಾಲ್ಲೂಕುಗಳ 310823 ಹೆ.ಭೂಮಿಗೆ ನೀರಾವರಿ ಒದಗಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿ ನೀರಾವರಿ ಕ್ಷೇತ್ರವನ್ನು ಸೃಷ್ಠಿಸಲಾಗಿದ್ದು, ಬಾಕಿ ಹೊಲಗಾಲುವೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಕಾಲುವೆಯ ಉದ್ದದ ವಿವರ ಈ ಕೆಳಗಿನಂತಿದೆ:

| ಕಾಲುವೆಯ ಉದ್ದ | ಘ.ಬ.ದ.ಕಾಲುವೆ | ಘ.ಎ.ದ.ಕಾಲುವೆ |
|---|---|---|
| ಎ) ಮುಖ್ಯ ಕಾಲುವೆ | 199 ಕಿ.ಮೀ. | 109 ಕಿ.ಮೀ. |
| ಬಿ) ಉಪ ಕಾಲುವೆ | 88 ಕಿ.ಮೀ. | 210 ಕಿ.ಮೀ. |
| ಸಿ) ಹಂಚು ಕಾಲುವೆ | 994 ಕಿ.ಮೀ. | 494 ಕಿ.ಮೀ. |

**ಘಟಪ್ರಭ ಯೋಜನೆಯಡಿಯ ಏತ ನೀರಾವರಿ ಯೋಜನೆಗಳು**

- ದಡ್ಡಿನಾಗನೂರು ಏತ ನೀರಾವರಿ ಯೋಜನೆ
- ರುಸ್ತುಂಪುರ ಏತ ನೀರಾವರಿ ಯೋಜನೆ
- ಕೊಟಬಾಗಿ ಏತ ನೀರಾವರಿ ಯೋಜನೆ

ಏತ ಕಾಮಗಾರಿಗಳ ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿವೆ

### 2. ಘಟಪ್ರಭಾ ಎಡದಂಡೆ ಕಾಲುವೆ ಆಧುನೀಕರಣ:

ಈ ಕಾಮಗಾರಿಯಡಿ ಘಟಪ್ರಭಾ ಯೋಜನೆಯ ಮುಖ್ಯ ಕಾಲುವೆ (0.00 ರಿಂದ 109.00 ರವರೆಗಿನ ಆಯ್ದ ಭಾಗಗಳಲ್ಲಿ) ಗೋಕಾಕ್ ಕಾಲುವೆ (0.00 ರಿಂದ 20.00 ರವರೆಗೆ) ಸೈದಾಪುರ ಕಾಲುವೆ (0.00 ರಿಂದ 24.00 ರವರೆಗೆ), ದಕ್ಷಿಣ ಕಾಲುವೆ (0.00 ರಿಂದ 45.00 ರವರೆಗಿನ ಆಯ್ದ ಭಾಗಗಳಲ್ಲಿ) ಗಳಲ್ಲಿ ಲೈನಿಂಗ್ ಮತ್ತು ಸ್ಟ್ರಕ್ಚರ್‌ಗಳ ಆಧುನೀಕರಣ ಮತ್ತು ಬೀಳಗಿ ಶಾಖಾ ಕಾಲುವೆಯ (0.00 ರಿಂದ 49.00 ರವರೆಗಿನ ಆಯ್ದ ಭಾಗಗಳಲ್ಲಿ) ಸ್ಟ್ರಕ್ಚರ್‌ಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಗೆ ರೂ.573 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ದೊರೆತಿದ್ದು. ಪ್ರಸ್ತುತ ಸದರಿ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

### 3. ಹಿಪ್ಪರಗಿ ನೀರಾವರಿ ಯೋಜನೆ:

ಹಿಪ್ಪರಗಿ ಯೋಜನೆಯಡಿ ಬೆಳಗಾವಿ, ಬಾಗಲಕೋಟ ಜಿಲ್ಲೆಗಳ ಅಥಣಿ, ಚಿಕ್ಕೋಡಿ, ಜಮಖಂಡಿ ತಾಲ್ಲೂಕುಗಳ 74742 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಠಿಸಲು ಯೋಜಿಸಲಾಗಿದೆ. ಕಾಲುವೆಯ ಉದ್ದ 306 ಕಿ.ಮೀ.ಇರುತ್ತದೆ. ಸದರಿ ಯೋಜನೆಯಡಿ ಈ ಕೆಳಕಂಡ ಏತ ಯೋಜನೆಗಳು ಒಳಗೊಂಡಿವೆ.

- ಐನಾಪುರ ಹಂತ 1 & 2 ಏತ ನೀರಾವರಿ ಯೋಜನೆ,
- ಕರಿಮಸೂತಿ ಹಂತ 1 & 2 ಏತ ನೀರಾವರಿ ಯೋಜನೆ,
- ಹಲ್ಯಾಳ ಹಂತ 1 & 2 ಏತ ನೀರಾವರಿ ಯೋಜನೆ,
- ಸಾವಳಗಿ ತುಂಗಳ ಏತ ನೀರಾವರಿ ಯೋಜನೆ.

ಏತ ನೀರಾವರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ಬಾಕಿ ಉಳಿದ ಹೋಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.

### 4. ಮಾರ್ಕಂಡೇಯ ಜಲಾಶಯ ಯೋಜನೆ:

ಮಾರ್ಕಂಡೇಯ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಬೆಳಗಾವಿ, ಹುಕ್ಕೇರಿ, ಗೋಕಾಕ, ಸವದತ್ತಿ ತಾಲ್ಲೂಕುಗಳ 14448 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಠಿಸಲು ಯೋಜಿಸಲಾಗಿದೆ. ಮಾರ್ಕಂಡೇಯ ಯೋಜನೆಯಿಂದ 7 ಮುಳಗಡೆ ಗ್ರಾಮಗಳ

ಪುನರವಸತಿ ಕೇಂದ್ರ ಪೂರ್ಣಗೊಳಿಸಿದ್ದು ಯೋಜನಾ ಸಂತ್ರಸ್ಥರನ್ನು ಸ್ಥಳಾಂತರಿಸಲಾಗಿದೆ. ಸದರಿ ಯೋಜನೆಯಡಿ ವಿತರಣಾ ನಾಲಾ ಹಾಗೂ ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿವೆ. ಉಳಿದ ಕಾಮಗಾರಿಗಳು ಪೂರ್ಣಗೊಂಡಿವೆ.

**5. ಮುರಗೋಡ ಏತ ನೀರಾವರಿ ಯೋಜನೆ:**

ಈ ಯೋಜನೆಯನ್ನು ಮಾರ್ಕಂಡೇಯ ಬಲದಂಡೆ ಕಾಲುವೆಯ 55 ಕಿ.ಮೀ. ರಲ್ಲಿ (ಮಳಗಲಿ ಗ್ರಾಮದ ಹತ್ತಿರ) ನೀರನ್ನು ಎತ್ತಿ 8 ಗ್ರಾಮಗಳ 1939 ಹೆ. ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಹೆಡ್ ವರ್ಕ್ ಕಾಮಗಾರಿಗಳು ಪ್ರಗತಿಯಲ್ಲಿದೆ. ಇನ್ನುಳಿದ ಕಾಮಗಾರಿಯ ಅಂದಾಜು ಪತ್ರಿಕೆಗಳು ತಯಾರಿಕಾ ಹಂತದಲ್ಲಿದೆ.

**6. ಚಚಡಿ ಏತ ನೀರಾವರಿ ಯೋಜನೆ:**

ಮಾರ್ಕಂಡೇಯ ಬಲದಂಡೆ ಕಾಲುವೆಯ 34 ಕಿ.ಮೀ. ನಲ್ಲಿ ನೀರನ್ನು ಎತ್ತಿ 2718 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಚಚಡಿ ಏತ ನೀರಾವರಿ ಯೋಜನೆ ಹೆಡ್ ವರ್ಕ್ ಮತ್ತು ಪ್ರಾರಂಭಿಕ 5 ಕಿ.ಮೀ ವರೆಗಿನ ಕಾಲುವೆ ಜಾಲ ಸಹಿತ ಗುತ್ತಿಗೆಯನ್ನು ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಇನ್ನುಳಿದ ಕಾಮಗಾರಿಯ ಅಂದಾಜು ಪತ್ರಿಕೆ ತಯಾರಿಕಾ ಹಂತದಲ್ಲಿರುತ್ತದೆ.

**7. ದೂಧಗಂಗಾ ನೀರಾವರಿ ಯೋಜನೆ:**

ಈ ಯೋಜನೆಯು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ಅಂತರ ರಾಜ್ಯ ಯೋಜನೆಯಾಗಿದೆ. ದೂದ್‌ಗಂಗಾ ನದಿಗೆ ಅಡ್ಡಲಾಗಿ ಕೊಲ್ಲಾಪುರ ಜಿಲ್ಲೆ, ರತ್ನಗಿರಿ ತಾಲ್ಲೂಕು, ಅಸಗಾಂ ಗ್ರಾಮದ ಬಳಿ ಸಂಯುಕ್ತ ಅಣೆಕಟ್ಟು ನಿರ್ಮಾಣ ಹಾಗೂ ಮಹಾರಾಷ್ಟ್ರ ರಾಜ್ಯದ 44,766 ಹೆಕ್ಟೇರ್ ಮತ್ತು ಕರ್ನಾಟಕ ರಾಜ್ಯದ 15,167 ಹೆ. ಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ 3 ಶಾಖಾ ಕಾಲುವೆಗಳಿದ್ದು ವಿವರಗಳು ಈ ಕೆಳಗಿನಂತಿವೆ:

| ಶಾಖಾ ಕಾಲುವೆ | ನಿಢೋರಿ | ಬಿದರಿ | ದತ್ತವಾಡ |
|---|---|---|---|
| ಉದ್ದ ಕಿ.ಮಿ. | 21.57 | 25.155 | 30.00 |

ನಿಢೋರಿ ಶಾಖಾ ಕಾಲುವೆ ಕಾಮಗಾರಿ ಪೂರ್ಣಗೊಂಡಿರುತ್ತದೆ. ಬಿದರಿ ಶಾಖಾ ಕಾಲುವೆ ಕಾಮಗಾರಿ ಪ್ರಗತಿಯಲ್ಲಿವೆ. ದತ್ತವಾಡ ಶಾಖಾ ಕಾಲುವೆಯು ಭೂಸ್ವಾಧೀನ ಸಮಸ್ಯೆಯಿಂದ ಕಾಮಗಾರಿಯ ಪ್ರಗತಿಯು ಕುಂಠಿತವಾಗಿರುತ್ತದೆ.

**8. ಬಳ್ಳಾರಿ ನಾಲಾ ಯೋಜನೆ:**

ಸದರಿ ಯೋಜನೆಯಡಿ ಮಾರ್ಕಂಡೇಯ ನದಿಯ ಮುಖ್ಯ ಉಪನದಿಯಾದ ಬಳ್ಳಾರಿ ನಾಲಾಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿ, ಬೆಳಗಾವಿ ಜಿಲ್ಲೆಯ ಬೆಳಗಾವಿ, ಗೋಕಾಕ, ಸವದತ್ತಿ, ಬೈಲಹೊಂಗಲ ತಾಲ್ಲೂಕಿನ 8200 ಹೆ. ಪ್ರದೇಶಕ್ಕೆ ನೀರಾವರಿ ಕ್ಷೇತ್ರ ಸೃಷ್ಠಿಸಲು ಯೋಜಿಸಲಾಗಿದೆ. ಅಣೆಕಟ್ಟಿನ ತಳಪಾಯ, ಬ್ಲಾಕ್ 1 ರಿಂದ 6 ಮತ್ತು 8 ರಿಂದ 18 (ಭಾಗಶಃ) ನ್ನು ನಿರ್ಮಿಸಲಾಗಿದೆ. ಮುಖ್ಯ ಕಾಲುವೆಯು 106 ಕಿ.ಮಿ. ಉದ್ದವಿದ್ದು ಕಿ.ಮೀ ನಂ 44 ರಿಂದ 106 ರವರೆಗಿನ ಕಾಲುವೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿವೆ (ಕಿ.ಮೀ ನಂ 1 ರಿಂದ 10 ರ ವರೆಗೆ 32 ರಿಂದ 40 ರ ವರೆಗೆ ಅರಣ್ಯ ಪ್ರದೇಶದಲ್ಲಿನ ಭಾಗಗಳನ್ನು ಹೊರತುಪಡಿಸಿ).

**9. ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ:**

ಶ್ರೀ ರಾಮೇಶ್ವರ ಏತ ನೀರಾವರಿ ಯೋಜನೆ ಅಡಿಯಲ್ಲಿ ಘಟಪ್ರಭಾ ನದಿಯಿಂದ 2.20 ಟಿ.ಎಂ.ಸಿ. ನೀರನ್ನೆತ್ತಿ ಬೆಳಗಾವಿ ಜಿಲ್ಲೆಯ ರಾಮದುರ್ಗ, ಸವದತ್ತಿ ಹಾಗೂ ಗೋಕಾಕ ತಾಲ್ಲೂಕುಗಳ ಒಟ್ಟು 13,800 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ತೂಬುಗಾಲುವೆ 13800 ಹೆ. ಸೃಷ್ಠಿಸಲಾಗಿದ್ದು, ಹೊಲಗಾಲುವೆ ಕಾಮಗಾರಿ ಪ್ರಗತಿಯಲ್ಲಿದೆ.

**10. ಕಿಣಿಯೇ ನೀರಾವರಿ ಯೋಜನೆ:**

ಬೆಳಗಾವಿ ಜಿಲ್ಲೆ, ಕಿಣಿಯೇ ಗ್ರಾಮದಲ್ಲಿ ಮಂಗೊತ್ರಿ ನಾಲೆಗೆ ಅಡ್ಡಲಾಗಿ ಆಣ್ಣೆಕಟ್ಟು ನಿರ್ಮಿಸಿ, ಖಾರೀಫ್ ಹಂಗಾಮಿನಲ್ಲಿ 1200 ಹೆ. ಹಾಗೂ ರಬಿ ಹಂಗಾಮಿನಲ್ಲಿ 275 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿದೆ. ಅಣೆಕಟ್ಟು ಮತ್ತು ತತ್ಸಂಬಂಧ ಕಾಮಗಾರಿಗಳು ಹಾಗು ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯಲ್ಲಿವೆ.

**11. ಹಿರಣ್ಯಕೇಶಿ ನದಿಯಿಂದ 22 ಕೆರೆಗಳನ್ನು ತುಂಬಿಸುವ ಕಾಮಗಾರಿ (ಹುಕ್ಕೇರಿ ತಾಲೂಕಿನ 18 ಕೆರೆಗಳು ಮತ್ತು ಚಿಕ್ಕೋಡಿ ತಾಲೂಕಿನ 4 ಕೆರೆಗಳು):**

ಸದರಿ ಯೋಜನೆಯ ರೂ.77 ಕೋಟಿಗಳ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಯೋಜನೆಯಡಿ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ಹುಕ್ಕೇರಿ ತಾಲೂಕಿನ 18 ಮತ್ತು ಚಿಕ್ಕೋಡಿ ತಾಲೂಕಿನ 4 ಕೆರೆಗಳಿಗೆ ನೀರನ್ನು ತುಂಬಿಸಲಾಗಿದೆ. ಮುಂದುವರೆದು ಸದರಿ ಕಾಮಗಾರಿಯನ್ನು ವಿಸ್ತರಿಸಿ ಹೆಚ್ಚುವರಿಯಾಗಿ 3 ಕೆರೆಗಳನ್ನು ತುಂಬಿಸುವ ಕಾಮಗಾರಿಯು ಪೂರ್ಣಗೊಂಡಿದ್ದು ಲೋಕಾರ್ಪಣೆ ಮಾಡಬೇಕಾಗಿರುತ್ತದೆ.

**12. ತುಬಚಿ–ಬಬಲೇಶ್ವರ ಏತ ನೀರಾವರಿ ಯೋಜನೆ:**

ತುಬಚಿ ಬಬಲೇಶ್ವರ ಏತ ನೀರಾವರಿ ಯೋಜನೆಯಡಿಯಲ್ಲಿ ಕೃಷ್ಣಾ ನದಿಯಿಂದ 6.30 ಟಿ.ಎಂ.ಸಿ ನೀರನ್ನು ಉಪಯೋಗಿಸಿ ವಿಜಯಪೂರ, ಅಥಣಿ, ಜಮಖಂಡಿ ತಾಲೂಕಿನ 52,700 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಮೊದಲನೆಯ ಹಂತವಾಗಿ (ಫ಼ಚಿಜ-ಖ) ಹೆಡ್‌ವರ್ಕ ಕಾಮಗಾರಿಯ ಟೆಂಡರ್‌ನ್ನು ಟರ್ನಕೀ ಆಧಾರದ ಮೇಲೆ ರೂ.1022.58 ಕೋಟಿಗಳಿಗೆ ಗುತ್ತಿಗೆ ವಹಿಸಿಕೊಡಲಾಗಿದ್ದು, ಹೆಡ್‌ವರ್ಕ್ಸ್ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ. ಎರಡನೇ ಹಂತವಾಗಿ (ಫ಼ಚಿಜ–ಖಖ) ಉಳಿದ ಹೆಡ್‌ವರ್ಕ ಕಾಮಗಾರಿಯ ಟೆಂಡರ್‌ನ್ನು ಟರ್ನಕೀ ಆಧಾರದ ಮೇಲೆ ರೂ.**533.63** ಕೋಟಿಗಳಿಗೆ ಗುತ್ತಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂದುವರೆದು ಯೋಜನೆಯ ಪಶ್ಚಿಮ, ಪೂರ್ವ, ಉತ್ತರ ಮತ್ತು ದಕ್ಷಿಣ ಮುಖ್ಯ ಕಾಲುವೆಯ ಕಾಮಗಾರಿಗಳನ್ನು ವಹಿಸಿಕೊಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

**13. ಬಸವೇಶ್ವರ (ಕೆಂಪವಾಡ) ಏತ ನೀರಾವರಿ ಯೋಜನೆ :**

ಬಸವೇಶ್ವರ (ಕೆಂಪವಾಡ) ಏತ ನೀರಾವರಿ ಯೋಜನಬೆಳಗಾವಿ ಜಿಲ್ಲೆಯ ಅಥಣಿ ತಾಲೂಕು ಐನಾಪೂರ ಗ್ರಾಮದ ಹತ್ತಿರ ಹಿಪ್ಪರಗಿ ಬ್ಯಾರೇಜಿನ ಹಿನ್ನೀರಿನಿಂದ 4.00 ಟಿಎಂಸಿ ನೀರನ್ನು ಮಳೆಗಾಲದಲ್ಲಿ ಬಳಸಿಕೊಂಡು ಅಥಣಿ ತಾಲೂಕಿನ ಉತ್ತರ ಭಾಗದ 22 ಹಳ್ಳಿಗಳ 27,462 ಹೆಕ್ಟೇರ್ ಒಣ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಪ್ರಸ್ತುತ ಯೋಜನೆಯ ಕಾಮಗಾರಿಗಳನ್ನು ರೂ.1363.48 ಕೋಟಿಗಳ ಮೊತ್ತದಲ್ಲಿ ವಹಿಸಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

**14. ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆ:**

ಶ್ರೀ ವೀರಭದ್ರೇಶ್ವರ ಏತ ನೀರಾವರಿ ಯೋಜನೆಯಡಿ 2.5 ಟಿಎಂಸಿ ನೀರನ್ನು ಘಟಪ್ರಭಾ ನದಿಯಿಂದ ಎತ್ತಿ ಮುಧೋಳ ಹಾಗೂ ರಾಮದುರ್ಗ ತಾಲ್ಲೂಕಿನ 17377 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲು ಹಾಗೂ 10 ಸಣ್ಣ ಕೆರೆಗಳನ್ನು ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.544.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಜನವರಿ 2015ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಪ್ರಸ್ತುತ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

**15. ವೆಂಕಟೇಶ್ವರ ಏತ ನೀರಾವರಿ ಯೋಜನೆ**

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನಡಿ ಬರುವ 6 ಹಳ್ಳಿಗಳು, ಮುಧೋಳ ತಾಲೂಕಿನ 4 ಹಳ್ಳಿಗಳು ಒಟ್ಟಾರೆ 10 ಗ್ರಾಮಗಳ 7200 ಹೆಕ್ಟೇರ ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಉದ್ದೇಶದಿಂದ ವೆಂಕಟೇಶ್ವರ ಏತ ನೀರಾವರಿ ಯೋಜನೆ ಕೈಗೊಳ್ಳಲು ಉದ್ದೇಶಿಸಲಾಗಿದೆ. ಸದರಿ ಯೋಜನೆಗೆ ಫೆಬ್ರವರಿ–2015ರಲ್ಲಿ ರೂ.174.42 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿರುತ್ತದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

**16. ಚಿಕ್ಕೋಡಿ ಶಾಖಾ ಕಾಲುವೆಯ ಸುಧಾರಣೆ ಕಾಮಗಾರಿ:**

ಚಿಕ್ಕೋಡಿ ಶಾಖಾ ಕಾಲುವೆಯು 88 ಕಿ.ಮೀ. ಉದ್ದವಿದ್ದು ಈ ಕಾಲುವೆ ನಿರ್ಮಾಣವನ್ನು 1984 ರಲ್ಲಿ ಪೂರ್ಣಗೊಳಿಸಿದ್ದು ಉದ್ದೇಶಿತ 33403 ಹೆ. ಅಚ್ಚುಕಟ್ಟಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಕಾಲುವೆಯ ದುರಸ್ತಿಯಿಂದ ಉದ್ದೇಶಿತ ಅಚ್ಚುಕಟ್ಟಿಗೆ

ನೀರಾವರಿ ಕಲ್ಪಿಸಲು ಅನಾನುಕೂಲವಾಗುತ್ತಿದ್ದು, ಕಾಲುವೆಯ ಮೊದಲ 30 ಕಿ.ಮೀ. ದುರಸ್ತಿಯಿಂದಾಗಿ 11481 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಿ ಮುಂದಿನ ಅಚ್ಚುಕಟ್ಟಿಗೂ ಸಹ ನೀರನ್ನು ಹರಿಸಲು ಅನುಕೂಲವಾಗುವಂತೆ ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

**17. ಸುಲ್ತಾನಪುರ ಬ್ರಿಡ್ಜ್ ಕಂ ಬಾಂಧಾರ ನಿರ್ಮಾಣ ಕಾಮಗಾರಿ:**

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸುಲ್ತಾನಪುರ ಗ್ರಾಮದ ಹತ್ತಿರ ಹಿರಣ್ಯಕೇಶಿ ನದಿಗೆ ಈ ಹಿಂದೆ ಅಡ್ಡಲಾಗಿ ನಿರ್ಮಿಸಿದ ಬ್ರಿಡ್ಜ ಕಂ ಬಾಂಧಾರವು 2015ರ ಜೂನ್ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದಾಗಿ ಶಿಥಿಲಗೊಂಡಿದ್ದು ಸುತ್ತ–ಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳು, ರೈತಾಪಿ ಚಟುವಟಿಕೆಗಳಿಗೆ ಹಾಗೂ ಸಾರ್ವಜನಿಕರ ಸಾರಿಗೆ ಸಂಪರ್ಕಕ್ಕೆ ಬಹಳ ತೊಂದರೆಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಹಾಗು ಭವಿಷ್ಯದ ವಾಹನ ಸಂಚಾರದ ದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತ ದೃಷ್ಟಿಯಿಂದ ಮೇಲ್ಮಟ್ಟದ ಬ್ರಿಡ್ಜ ಹಾಗೂ ಕೆಳಮಟ್ಟದ ಬಾಂಧಾರದ ನಿರ್ಮಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನ ವರದಿಗೆ ಫೆಬ್ರವರಿ–2017ರಲ್ಲಿ 19.52 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಪ್ರಸ್ತುತ ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡಿರುತ್ತದೆ.

**18. ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳು ಹಾಗೂ ಇತರೆ 22 ಹೆಚ್ಚುವರಿ ಕೆರೆಗಳನ್ನು ತುಂಬಿಸುವ ಯೋಜನೆ:**

ರಾಯಬಾಗ ತಾಲ್ಲೂಕಿನ 10 ಗ್ರಾಮಗಳ 17 ಕೆರೆಗಳು ಹಾಗೂ ಇತರೆ 22 ಹೆಚ್ಚುವರಿ ಕೆರೆಗಳ ಯೋಜನೆಯಡಿ ಬೆಳಗಾವಿ ಜಿಲ್ಲೆಯ ಒಟ್ಟು 39 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಒಳಹರಿವಿನ ಕೊರತೆಯಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.91.40 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**19. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ 10 ಗ್ರಾಮಗಳ 19 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸುವ ಯೋಜನೆ:**

ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ ಬಸ್ತವಾಡ, ಖಣದಾಳ, ಕಟಕಬಾವಿ, ದೇವಾಪೂರಹಟ್ಟಿ, ನಿಡಗುಂದಿ ಮತ್ತು ಸವಸುದ್ದಿ, ಮೊರಬ, ನಿಲಜಿ, ಸುಟ್ಟಟ್ಟಿ ಮತ್ತು ಹಾರೂಗೇರಿ ಗ್ರಾಮಗಳಲ್ಲಿ ಕಳೆದ ಹತ್ತಾರು ವರ್ಷಗಳಿಂದ ಒಳಹರಿವಿನ ಕೊರತೆಯಿಂದ ಕೆರೆ ಬಾವಿಗಳು ಬತ್ತಿ, ಅಂತರ್‌ಜಲ ಮಟ್ಟ ಕುಸಿದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು, ಈ ಸಮಸ್ಯೆಗೆ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕುಡಚಿ ಮತಕ್ಷೇತ್ರದಲ್ಲಿ ಬರುವ 10 ಗ್ರಾಮಗಳ 19 ಕೆರೆಗಳನ್ನು ಕೃಷ್ಣಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.34.383 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**20. ಕುಲ್ಲಹಳ್ಳಿ ಹುನ್ನೂರ ಏತ ನೀರಾವರಿ ಯೋಜನೆ:**

ಘಟಪ್ರಭಾ ಎಡದಂಡೆ ಮುಖ್ಯ ಕಾಲುವೆಯ ಕಿ.ಮೀ. 70 (ಚಿಮ್ಮಡ ಚೌಕಿ) ರಲ್ಲಿ ಜಮಖಂಡಿ ಶಾಖಾ ಕಾಲುವೆ ಪ್ರಾರಂಭವಾಗುತ್ತಿದ್ದು, ಜಮಖಂಡಿ ಶಾಖಾ ಕಾಲುವೆಯ ಚೈ 20+650 ರ (ಮೈಗೂರ ಚೌಕಿ) ಕೆಳಭಾಗದಲ್ಲಿ ಬರುವ 9164 ಹೆಕ್ಟೇರ್ ಅಚ್ಚುಕಟ್ಟು ನೀರಾವರಿಯಿಂದ ಭಾದಿವಾಗಿರುವುದರಿಂದ ಸದರಿ ಕ್ಷೇತ್ರಕ್ಕೆ ಮುಂಗಾರು ಹಂಗಾಮಿನಲ್ಲಿ ಕೃಷ್ಣಾ ನದಿಯಿಂದ 0.88 ಟಿಎಂಸಿ ನೀರನ್ನು ಎತ್ತಿ ಏತ ನೀರಾವರಿ ಮೂಲಕ ಸ್ಥಿರಗೊಳಿಸಲು (ಣಚಿಭುಟ್ಳುಚಿಣುಂಟಿ) ಕುಲಹಳ್ಳಿ–ಹುನ್ನೂರ ಏತ ನೀರಾವರಿ ಯೋಜಯನ್ನು ಕೈಗೆತ್ತಿಕೊಳ್ಳಲಾಗಿದೆ. ಯೋಜನೆಯ ರೂ.73.75 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**21. ಗೊಡಚಿನಮಲ್ಕಿ ಏತ ನೀರಾವರಿ ಯೋಜನೆ:**

ಗೊಡಚಿನಮಲ್ಕಿ ಏತ ನೀರಾವರಿ ಯೋಜನೆಯಡಿ ಒಟ್ಟು 2568.42 ಹೆಕ್ಟೇರ್ ಭೂಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು 2 ಹಂತಗಳಲ್ಲಿ ಒದಗಿಸುವ ಗುರಿ ಹೊಂದಲಾಗಿದ್ದು, ಸದರಿ ಏತ ನೀರಾವರಿ ಯೋಜನೆಗೆ, ಮಾಸ್ಟರ್ ಪ್ಲಾನ್ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ 0.50 ಟಿಎಂಸಿ ನೀರಿನ ಹಂಚಿಕೆಗೆ ಪರಿಗಣಿಸಲಾಗಿರುತ್ತದೆ.

ಮೊದಲನೇ ಹಂತದಲ್ಲಿ 1031.51 ಹೆಕ್ಟೇರ್ ಪ್ರದೇಶಕ್ಕೆ ಘಟಪ್ರಭಾ ನದಿಯಿಂದ 0.191 ಟಿಎಂಸಿ ನೀರನ್ನು ಮತ್ತು ಎರಡನೇ ಹಂತದಲ್ಲಿ 1537.91 ಹೆಕ್ಟೇರ್ ಪ್ರದೇಶಕ್ಕೆ ಮಾರ್ಕಂಡೇಯ ನದಿಯಿಂದ 0.280 ಟಿಎಂಸಿ ನೀರನ್ನು ಎತ್ತಿ ಗೋಕಾಕ್ ತಾಲ್ಲೂಕಿನ 12 ಗ್ರಾಮಗಳ ಒಟ್ಟಾರೆ 2568.42 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.73.75 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**22. ಗಲಗಲಿ ಬ್ಯಾರೇಜನ್ನು ಸದೃಢಗೊಳಿಸಿ ಎತ್ತರಿಸುವ ಯೋಜನೆ:**

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಗಲಗಲಿ ಹಾಗೂ ಚಿಕ್ಕಗಲಗಲಿ ಗ್ರಾಮಗಳ ನಡುವೆ ಕೃಷ್ಣಾ ನದಿಗೆ ಅಡ್ಡಲಾಗಿ 1973 ರಲ್ಲಿ ಗಲಗಲಿ ಬಾಂದಾರ ನಿರ್ಮಿಸಲಾಗಿರುತ್ತದೆ. ಸದರಿ ಬ್ಯಾರೇಜಿನ ನೀರಿನ ಸಂಗ್ರಹ ಸಾಮರ್ಥ್ಯ 0.569 ಟಿಎಂಸಿ. ಸದರಿ ಬ್ಯಾರೇಜ್‌ನಿಂದ 7748 ಎಕರೆ ಭೂಮಿಗೆ ನೀರಾವರಿ ಕಲ್ಪಿಸಲಾಗುತ್ತಿದ್ದು, ಬೇಸಿಗೆ ಕಾಲದಲ್ಲಿ ಸುಮಾರು 20 ಗ್ರಾಮಗಳಿಗೆ ಕುಡಿಯುವ ನೀರಿಗೆ ಬಳಕೆಯಾಗುತ್ತಿದೆ. ಜನಸಂಖ್ಯೆ ಹೆಚ್ಚಾದ ಪ್ರಯುಕ್ತ ನೀರಿನ ಬೇಡಿಕೆ ಹೆಚ್ಚಾಗಿದ್ದು, ಸದರಿ ಬ್ಯಾರೇಜನ್ನು ಸಧೃಡಗೊಳಿಸಿ ಎತ್ತರಿಸಿ ಬ್ಯಾರೇಜ್‌ನ ಸಾಮರ್ಥ್ಯವನ್ನು 0.569 ಟಿಎಂಸಿ ಇಂದ 1.244 ಟಿಎಂಸಿಗೆ ಹೆಚ್ಚಿಸಬಹುದಾಗಿದ್ದು, ಇದರಿಂದ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಗ್ರಾಮಗಳ ಕುಡಿಯುವ ನೀರಿನ ಬೇಡಿಕೆಯನ್ನು ಪೂರೈಸಬಹುದಾಗಿದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**23. ಸಾಲಾಪೂರ ಏತ ನೀರಾವರಿ ಯೋಜನೆ:**

ಸಾಲಾಪೂರ ಏತ ನೀರಾವರಿ ಯೋಜನೆಯಡಿ ಪ್ರಸ್ತುತ ಪ್ರಗತಿಯಲ್ಲಿರುವ ರಾಮೇಶ್ವರ ಹಾಗೂ ವೀರಭದ್ರೇಶ್ವರ ಏತ ನೀರಾವರಿ ಯೋಜನೆಗಳಿಂದ ವಂಚಿತವಾಗಿರುವ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಚಿಕ್ಕೂರು ತಾಂಡಾ ಬಳಿ ಘಟಪ್ರಭಾ ನದಿಯಿಂದ ನೀರನ್ನೆತ್ತಿ ರಾಮದುರ್ಗ ತಾಲ್ಲೂಕಿನ 19 ಹಳ್ಳಿಗಳು (10878 ಹೆ.), ಬಾದಾಮಿ ತಾಲ್ಲೂಕಿನ 6 ಹಳ್ಳಿಗಳು (1832 ಹೆ.) ಹಾಗೂ ಮುಧೋಳ ತಾಲ್ಲೂಕಿನ 2 ಹಳ್ಳಿಗಳು (290 ಹೆ.) ಸೇರಿದಂತೆ ಒಟ್ಟಾರೆ 13,000 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಯೋಜಿಸಲಾಗಿದೆ. ಸದರಿ ಯೋಜನೆಯನ್ನು ಎರಡು ಹಂತಗಳಲ್ಲಿ ಅಂದರೆ ಮೊದಲ ಹಂತವನ್ನು ರೂ.327.00 ಕೋಟಿಗಳಲ್ಲಿ ಹಾಗು ಎರಡನೆ ಹಂತವನ್ನು ರೂ.239.00 ಕೋಟಿಗಳಲ್ಲಿ ಆದ್ಯತೆಯಾನುಸಾರ ಹಂತಹಂತವಾಗಿ ತೆಗೆದುಕೊಳ್ಳುವ ಷರತ್ತಿಗೊಳಪಟ್ಟು ರೂ.566.00 ಕೋಟಿಗಳಿಗೆ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಮೊದಲನೆ ಹಂತದ ಕಾಮಗಾರಿಗಳು ಪ್ರಗತಿಯಲ್ಲಿವೆ.

**24. ಕಿತ್ತೂರು ಕೆರೆ ತುಂಬಿಸುವ ಯೋಜನೆ:**

ಬೆಳಗಾವಿ ಜಿಲ್ಲೆಯ ಕಿತ್ತೂರು ಮತ್ತು ಬೈಲಹೊಂಗಲ ಮತಕ್ಷೇತ್ರದ 64 ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸಲು ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಕೆರೆಗಳಿಗೆ ಮಳೆಯ ಅಭಾವದಿಂದ ನೀರಿನ ಸಂಗ್ರಹಣೆಯಾಗದೇ, ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿರುತ್ತದೆ. ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ, ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

**25. ಮಲಪ್ರಭಾ ಯೋಜನೆ:**

ಮಲಪ್ರಭಾ ಯೋಜನೆಯು ಬೆಳಗಾವಿ ಜಿಲ್ಲೆಯ ಸೌವದತ್ತಿ ತಾಲೂಕಿನಲ್ಲಿ ಮುನವಳ್ಳಿ ಗ್ರಾಮದ ಹತ್ತಿರ ಮಲಪ್ರಭಾ ನದಿಗೆ ಅಡ್ಡವಾಗಿ ಆಣೆಕಟ್ಟು ನಿರ್ಮಿಸಿ, ಕಾಲುವೆಗಳಿಂದ ಬೆಳಗಾವಿ, ಬಾಗಲಕೋಟೆ, ಮತ್ತು ಧಾರವಾಡ ಜಿಲ್ಲೆಗಳಲ್ಲಿ ಒಟ್ಟು 1,96,132 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶವನ್ನು ಒಳಗೊಂಡಿರುತ್ತದೆ. ಅಣೆಕಟ್ಟು ಹಾಗೂ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿದ್ದು, ಹೊಲಗಾಲುವೆ ಕಾಮಗಾರಿಗಳು ಪ್ರಗತಿಯಲ್ಲಿವೆ.

**26. ಮಲಪ್ರಭಾ ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಯ ಆಧುನೀಕರಣ ಯೋಜನೆ:**

ಮಲಪ್ರಭಾ ಮುಖ್ಯ ಕಾಲುವೆಯು ಸುಮಾರು 35 ವರ್ಷಗಳ ಹಿಂದೆ ಹಾಗೂ ಹಂತ ಹಂತವಾಗಿ ನಿರ್ಮಿಸಿದ್ದು ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿದ್ದು, ಕಾಲುವೆಯ ಕೊನೆಯ ಭಾಗಗಳಿಗೆ ನೀರನ್ನು ಸಮರ್ಪಕವಾಗಿ ಒದಗಿಸುವುದು ದುಸ್ತರವಾಗಿರುತ್ತದೆ. ಅಲ್ಲದೇ, ಮುಖ್ಯವಾಗಿ ಬಲದಂಡೆ ಕಾಲುವೆ/ ನರಗುಂದ ಹಂಚು ಕಾಲುವೆಗಳು ಎರೆ ಮಣ್ಣಿನ ಪ್ರದೇಶದಲ್ಲಿ ಹಾಯುತ್ತಿದ್ದು, ಮಣ್ಣಿನ ಗುಣಧರ್ಮವನ್ನು ಪರಿಗಣಿಸಿದ್ದಲ್ಲಿ ಕಾಲುವೆ ನಿರ್ಮಾಣವು ಸವಾಲಾಗಿ ಪರಿಣಮಿಸಿದೆ. ಆದ್ದರಿಂದ ಶಿಥಿಲಾವಸ್ಥೆಯಲ್ಲಿರುವ ಕಾಲುವೆ, ಸಿ.ಡಿ. ಕಾಮಗಾರಿಗಳ ನಿರ್ಮಾಣ/ನವೀಕರಣ/ದುರಸ್ತಿ ಕಾಮಗಾರಿಗಳು ಅವಶ್ಯಕವಾಗಿರುತ್ತದೆ.

ಮಲಪ್ರಭಾ ಮುಖ್ಯ ಕಾಲುವೆ ಮತ್ತು ವಿತರಣಾ ಕಾಲುವೆಯ ಆಧುನೀಕರಣ ಕಾಮಗಾರಿಯ ರೂ. 1120.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯಗೆ ಸರ್ಕಾರದಿಂದ ಆಗಸ್ಟ್-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿರುತ್ತದೆ. ಮುಂದುವರೆದು, ಯೋಜನೆಯ ಕೊನೆಯ ಭಾಗದವರೆಗೆ ನೀರನ್ನು ಸಮರ್ಪಕವಾಗಿ ಹರಿಸಲು ಉಳಿದ ಹಂಚು ಮತ್ತು ಉಪಹಂಚು ಕಾಲುವೆಗಳನ್ನು ಆಧುನೀಕರಣಗೊಳಿಸುವ ಅವಶ್ಯಕತೆಯಿದ್ದು, ಎರಡನೇ ಹಂತದಲ್ಲಿ ರೂ.1000 ಕೋಟಿ ಮೊತ್ತದ ಕಾಮಗಾರಿಗಳಿಗೆ ಅಕ್ಟೋಬರ್ 2019ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**27. ಅಮರಗೋಳ – ಗೊಬ್ಬರಗುಂಪಿ ಏತ ನೀರಾವರಿ ಯೋಜನೆ:**

ನರಗುಂದ ಶಾಖಾ ಕಾಲುವೆಯ ಡಿ-6 ಹಂಚಿಕೆಯ 17-ಎಲ್ ಉಪ ಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 1696 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಅಮರಗೋಳ ಗ್ರಾಮದ ಹತ್ತಿರ ಬೆಣ್ಣೆಹಳ್ಳಕ್ಕೆ ಏತ ನೀರಾವರಿ ಯೋಜನೆಯನ್ನು ಹಾಗೂ ಡಿ-6 ಹಂಚಿಕೆಯ ಕೊನೆಯ ಭಾಗದ ನೀರಾವರಿ ಭಾದಿತ 2160 ಹೆಕ್ಟೇರ್ ಪ್ರದೇಶಕ್ಕೆ ನೀರು ಪೂರೈಸಲು ಗೊಬ್ಬರಗುಂಪಿ ಗ್ರಾಮದ ಹತ್ತಿರ ಬೆಣ್ಣೆಹಳ್ಳದ ಪ್ರಮುಖ ಉಪಹಳ್ಳವಾದ ತುಪ್ಪರಿಹಳ್ಳಕ್ಕೆ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಅಮರಗೋಳ ಹಾಗೂ ಗೊಬ್ಬರಗುಂಪಿ ಏತ ನೀರಾವರಿ ಯೋಜನೆ ಸೇರಿದಂತೆ ಒಂದು ಪ್ಯಾಕೇಜ್ ಅಡಿಯಲ್ಲಿ ರೂ.48.08 ಕೋಟಿಗಳಿಗೆ ಟೆಂಡರ್ ಆಧಾರದ ಮೇಲೆ ವಹಿಸಿಕೊಡಲಾಗಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಿ ಲೋಕಾರ್ಪಣೆಗೊಳಿಸಲಾಗಿದೆ.

**28. ಕಳಸಾ ಮತ್ತು ಬಂಡೂರ ನಾಲಾ ಯೋಜನೆಗಳು:**

**ಕಳಸಾ ನಾಲಾ ತಿರುವು ಯೋಜನೆ:** ಈ ಯೋಜನೆಯಡಿ ಕಳಸಾ ನಾಲಾ ಮತ್ತು ಹಲತಾರಾ ನಾಲಾಗಳ ಮೇಲೆ ಆಣೆಕಟ್ಟು ನಿರ್ಮಿಸಿ ಕೂಡು ಕಾಲುವೆಯ ಮುಖಾಂತರ 1.72 ಟಿ.ಎಂ.ಸಿ ನೀರನ್ನು ಮಲಪ್ರಭಾ ನದಿಗೆ ಹರಿಸಲು ಯೋಜಿಸಲಾಗಿದೆ. ಪ್ರಸ್ತುತ ದಿನಾಂಕ:27-02-2020ರ ಮಹಾದಾಯಿ ನ್ಯಾಯಾಧೀಕರಣದ ಐ-ತೀರ್ಪಿನನ್ವಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು ಸದರಿ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದಿಂದ ತಿರುವಳಿ ದೊರೆತ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳಲಾಗುವುದು.

**ಬಂಡೂರ ನಾಲಾ ತಿರುವು ಯೋಜನೆ:** ಈ ಯೋಜನೆಯು ಖಾನಾಪೂರ ತಾಲೂಕಿನ ನೆರ್ಸೆ ಗ್ರಾಮದ ಹತ್ತಿರ ಪಶ್ಚಿಮಾಭಿಮುಖವಾಗಿ ಹರಿದು ಗೋವಾ ರಾಜ್ಯಕ್ಕೆ ಸೇರುವ ಬಂಡೂರ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸಿ ಬಂಡೂರ ಜಲಾಶಯದಿಂದ ಕೂಡು ಕಾಲುವೆ ನಿರ್ಮಿಸಿ 2.18 ಟಿ.ಎಂ.ಸಿ ನೀರನ್ನು ಮಲಪ್ರಭಾ ನದಿಗೆ ತಿರುಗಿಸುವ ಯೋಜನೆಯಾಗಿರುತ್ತದೆ. ಪ್ರಸ್ತುತ ದಿನಾಂಕ:27-02-2020ರ ಮಹಾದಾಯಿ ನ್ಯಾಯಾಧೀಕರಣದ ಐ-ತೀರ್ಪಿನನ್ವಯ ವಿವರವಾದ ಯೋಜನಾ ವರದಿಯನ್ನು ತಯಾರಿಸಲಾಗಿದ್ದು ಸದರಿ ಯೋಜನಾ ವರದಿಗೆ ಕೇಂದ್ರ ಜಲ ಆಯೋಗದಿಂದ ತಿರುವಳಿ ದೊರೆತ ನಂತರ ಕಾಮಗಾರಿಗಳನ್ನು ಕೈಗೆತ್ತಿಕೊಳಲಾಗುವುದು.

**29. ಕೊಣ್ಣೂರು ಏತ ನೀರಾವರಿ ಯೋಜನೆ**

ಈ ಯೋಜನೆಯನ್ನು ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಬಳಿ ನಿರ್ಮಿಸಲಾಗಿದೆ. ಮಲಪ್ರಭಾ ನದಿಯಿಂದ ಕೊಣ್ಣೂರಿನಲ್ಲಿ 0.39 ಟಿಎಂಸಿ ನೀರನ್ನು ಎತ್ತಿ ನರಗುಂದ ಶಾಖಾ ಕಾಲುವೆಯ ಬಾಧಿತ 1578 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದು ಭೂಸ್ವಾಧೀನದ ಸಮಸ್ಯೆ ಕಾರಣಗಳಿಂದ ಕಾಮಗಾರಿಯ ಪ್ರಗತಿ ಕುಂಠಿತವಾಗಿರುತ್ತದೆ.

**30. ಶಿಗ್ಗಾಂವ್ ಏತ ನೀರಾವರಿ ಯೋಜನೆ:**

ಹಾವೇರಿ ಜಿಲ್ಲೆಯ ಶಿಗ್ಗಾಂವ್, ಸವಣೂರು ಮತ್ತು ಹಾನಗಲ್ ತಾಲೂಕುಗಳ ತುಂತುರು ಹನಿ ನೀರಾವರಿ ಯೋಜನೆಯಿಂದ 9900 ಹೆಕ್ಟೇರ್ ಭೂಮಿಗೆ ಮತ್ತು 3600 ಹೆಕ್ಟೇರ್ ಭೂಮಿಗೆ ಹನಿ ನೀರಾವರಿ ಒದಗಿಸಲು ಈ ಯೋಜನೆಯಿಂದ ಉದ್ದೇಶಿಸಲಾಗಿದೆ. ದಿನಾಂಕ 30.10.2013ರ ಸರ್ಕಾರಿ ಆದೇಶದ ಅನ್ವಯ ಪರಿಷ್ಕೃತ ವಿವರವಾದ ಯೋಜನಾ ವರದಿಗೆ ರೂ.532.00 ಕೋಟಿಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತಿದೆ. ಜ್ಯಾಕ್‌ವೆಲ್–ಪಂಪ್‌ಹೌಸ್, ರೈಸಿಂಗ್ ಮೇನ್ ಕಾಮಗಾರಿಗಳು ಪೂರ್ಣಗೊಂಡಿವೆ. 9900ಹೆ. ಪ್ರದೇಶದ ಜಮೀನುಗಳಿಗೆ ನೀರನ್ನು ಒದಗಿಸಲು ತುಂತುರು ನೀರಾವರಿ ಪದ್ಧತಿ ಅಳವಡಿಸಲಾಗಿದ್ದು ಕಾಮಗಾರಿ ಮುಕ್ತಾಯವಾಗಿರುತ್ತದೆ. ಸದರಿ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಲಾಗಿದೆ. ಡೈವರ್ಷನ್ ವಿಯರ್ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಉಳಿದಂತೆ ಶಿಗ್ಗಾಂವ್ ಏತ ನೀರಾವರಿ ಯೋಜನೆಯ ಬಾಕಿ ಉಳಿದ 3,600 ಹೆಕ್ಟೇರ್ ಪ್ರದೇಶಕ್ಕೆ ಹನಿ ನೀರಾವರಿ ಮುಖಾಂತರ ನೀರಾವರಿ ಸೌಲಭ್ಯ ಒದಗಿಸುವ ಕುರಿತಂತೆ, ಅಂದಾಜು ಪತ್ರಿಕೆಯನ್ನು ತಯಾರಿಸಲಾಗುತ್ತಿದೆ. ಮುಂದುವರೆದು, ಯೋಜನೆಯಡಿ 18 ಕೆರೆ ತುಂಬಿಸುವ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ 39 ಕೆರೆಗಳನ್ನು ತುಂಬಿಸುವ ಕಾಮಗಾರಿ ಪ್ರಗತಿಯಲ್ಲಿವೆ.

**31. ಸವಣೂರ ಏತ ನೀರಾವರಿ ಯೋಜನೆ:**

ಈ ಯೋಜನಡಯಡಿ ಸವಣೂರು ತಾಲ್ಲೂಕಿನ ಕಲಸೂರು ಗ್ರಾಮದ ಹತ್ತಿರ ವರದಾ ನದಿಯಿಂದ 1.5 ಟಿಎಂಸಿ ನೀರನ್ನೆತ್ತಿ ಸವಣೂರು ತಾಲ್ಲೂಕಿನ 30 ಹಳ್ಳಿಗಳ ಒಟ್ಟು 15,500 ಹೆ. ಪ್ರದೇಶಕ್ಕೆ ಸೂಕ್ಷ್ಮ ಹನಿ ನೀರಾವರಿ ಮುಖಾಂತರ 1.35 ಟಿಎಂಸಿ ನೀರನ್ನು ಉಪಯೋಗಿಸಿ ನೀರಾವರಿಗೊಳಪಡಿಸಲು, ಸವಣೂರು ತಾಲ್ಲೂಕಿನ 9 ಸಣ್ಣ ನೀರಾವರಿ ಕೆರೆಗಳಿಗೆ 0.091 ಟಿಎಂಸಿ ನೀರನ್ನು ಉಪಯೋಗಿಸಿ ಕೆರೆ ತುಂಬಿಸಲು ಹಾಗೂ 0.059 ಟಿಎಂಸಿ ನೀರನ್ನು ಕುಡಿಯುವ ನೀರು ಒದಗಿಸಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯ ಹೆಡ್‌ವರ್ಕ್ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಯೋಜನೆಯ ಹೆಡ್‌ವಕ್, 9 ಸಣ್ಣ ನೀರಾವರಿ ಕೆರೆಗಳನ್ನು ತುಂಬಿಸುವ ಹಾಗು ಹೆಚ್ಚುವರಿಯಾಗಿ 39 ಕೆರೆಗಳನ್ನು ತುಂಬಿಸುವ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಮುಂದುವರೆದು, 3200 ಹೆ. ಪ್ರದೇಶಕ್ಕೆ ಹನಿ ನೀರಾವರಿ ಮೂಲಕ ನೀರಾವರಿ ಕಲ್ಪಿಸುವ ಕಾಮಗಾರಿಯ ಅಂದಾಜು ಪತ್ರಿಕೆ ಪರಿಶೀಲನೆಯ ಹಂತದಲ್ಲಿದೆ.

**32. ಕೊಳಚಿ ಬಲದಂಡೆ ಕಾಲುವೆ ಆಧುನೀಕರಣ:**

ಕೊಳಚಿ ವಿಯರ್‌ನ್ನು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕೊಳಚಿ ಗ್ರಾಮದ ಬಳಿ ಮಲಪ್ರಭಾ ನದಿಗೆ ಅಡ್ಡಲಾಗಿ ಕಟ್ಟಲಾಗಿರುತ್ತದೆ. ಕೊಳಚಿ ಬಲದಂಡೆ ಕಾಲುವೆಯು 49 ಕಿ.ಮೀ. ಉದ್ದವಿದ್ದು, 5877 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಕಾಮಗಾರಿಯು ಬಹಳ ಹಿಂದೆಯೇ ಪೂರ್ಣಗೊಂಡಿದ್ದು, ಪ್ರಸ್ತುತ ಆಧುನೀಕರಣ ಕಾಮಗಾರಿಯನ್ನು 5 ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡಿದ್ದು, ಈ ಪೈಕಿ 4 ಪ್ಯಾಕೇಜ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

**33. ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸಿದ್ದನಬಾವಿ, ಬೆಂಡಿಗೇರಿ ಮತ್ತು ಮುತ್ನಾಳ ಗ್ರಾಮಗಳ ಕೆರೆಗಳನ್ನು ಮಲಪ್ರಭಾ ನದಿಯಿಂದ ತುಂಬಿಸುವ ಯೋಜನೆ:**

ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಸಿದ್ದನಬಾವಿ ಬೆಂಡಿಗೇರಿ ಮತ್ತು ಮುತ್ನಾಳ ಕೆರೆಗಳನ್ನು ಪಾರಿಶ್ವಾಡ ಗ್ರಾಮದ ಹತ್ತಿರ ಮಲಪ್ರಭಾ ನದಿಯಿಂದ 0.0285 ಟಿಎಂಸಿ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸರ್ಕಾರವು ಮಾರ್ಚ್ 2017ರಲ್ಲಿ ರೂ.12.57 ಕೋಟಿಗಳ ಮೊತ್ತಕ್ಕೆ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**34. ತುಪ್ಪರಿಹಳ್ಳದಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆ:**

ಧಾರವಾಡ ಜಿಲ್ಲೆ ಧಾರವಾಡ ತಾಲ್ಲೂಕಿನ ತಡಕೋಡ, ಬೋಕ್ಯಾಪೂರ, ಗರಗ, ಹಳೇತೇಗೂರ, ಬೋಗೂರ ಮತ್ತು ನೀರಲಕಟ್ಟಿ ಗ್ರಾಮಗಳ ಸಣ್ಣ ನೀರಾವರಿ ಕೆರೆಗಳಿಗೆ ತುಪ್ಪರಿಹಳ್ಳದಿಂದ ನೀರು ತುಂಬಿಸಲು ಯೋಜಿಸಲಾಗಿದೆ. ತುಪ್ಪರಿಹಳ್ಳಕ್ಕೆ

ಪೋಲಾವರಂ ಯೋಜನೆಯಡಿ ಗೋದಾವರಿ ನೀರನ್ನು ಕೃಷ್ಣಾ ಕೊಳ್ಳಕ್ಕೆ ತಿರುವುಗೊಳಿಸಿ, ಅದರಲ್ಲಿ ಹಂಚಿಕೆ ಮಾಡಲಾದ 1.00 ಟಿಎಂಸಿ ನೀರಿನಲ್ಲಿ 0.164 ಟಿಎಂಸಿ ನೀರನ್ನು ಬಳಸಿಕೊಂಡು ಈ 9 ಕೆರೆಗಳನ್ನು ತುಂಬಿಸುವ ಯೋಜನೆಗೆ ಮಾರ್ಚ್ 2017ರಲ್ಲಿ ರೂ.22.50 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**35. ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ ಕೆರೆ ಹಾಗೂ ಬಾಂಧಾರಗಳಿಗೆ ಕಾಳಿ ನದಿಯಿಂದ ನೀರನ್ನು ತುಂಬಿಸುವ ಯೋಜನೆ**

ಈ ಯೋಜನೆಯಡಿ ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನ 46 ಕೆರೆಗಳು ಹಾಗೂ 19 ಬ್ಯಾರೇಜ್‌ಗಳನ್ನು ಕಾಳಿ ನದಿಯಿಂದ 0.812 ಟಿಎಂಸಿ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ಬೇಸಿಗೆ ಸಮಯದಲ್ಲಿ ರೈತರಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದು, ಪ್ರತಿ ವರ್ಷ ಜನವರಿಯಿಂದ ಜೂನ್‌ವರೆಗೂ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರಣ ಮಾಡಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಿಗೆ ರೂ.220.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**36. ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಸಣ್ಣ ನೀರಾವರಿ ಕೆರೆಗಳನ್ನು ಬೇಡ್ತಿ ನದಿಯಿಂದ ಏತ ನೀರಾವರಿ ಮೂಲಕ ತುಂಬಿಸುವ ಯೋಜನೆ**

ಈ ಯೋಜನೆಯಡಿ ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ 35 ಕೆರೆಗಳನ್ನು ಬೆಳವಂತರ ಗ್ರಾಮದ ಹತ್ತಿರ ಬೇಡ್ತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸಿ, 0.449 ಟಿಎಂಸಿ ನೀರನ್ನೆತಿ ಕೆರೆಗಳ ಒಟ್ಟು ಸಂಗ್ರಹಣಾ ಸಾಮರ್ಥ್ಯದ ಶೇ. 50 ರಷ್ಟು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ಕೆರೆಗಳ ಸುತ್ತಮುತ್ತಲಿನ ಗ್ರಾಮದ ಜನ–ಜಾನುವಾರುಗಳಿಗೆ ನೀರಿನ ಲಭ್ಯತೆ, ಅಂತರ್ಜಲ ಮಟ್ಟ ಸುಧಾರಣೆ ಹಾಗೂ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಿಗೆ ರೂ.125.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**37. ಮುಂಡಗೋಡ್ ಕೆರೆ ತುಂಬಿಸುವ ಯೋಜನೆ:**

ಸದರಿ ಏತ ನೀರಾವರಿ ಯೋಜನೆಯಡಿ ಮುಂಡಗೋಡ್ ತಾಲ್ಲೂಕಿನ ಕೆರೆಗಳಿಗೆ ಒಳಹರಿವಿನ ಅಭಾವದಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣ ನೀರು ಸಂಗ್ರಹಣೆಯಾಗದೇ ಇರುವುದರಿಂದ ಮಳೆಗಾಲದಲ್ಲಿ ಸಣ್ಣ ನೀರಾವರಿ ಇಲಾಖೆಯ 129 ಕೆರೆಗಳನ್ನು ಬೇಡ್ತಿ ನದಿಯಿಂದ 1.48 ಟಿ.ಎಂ.ಸಿ. ನೀರನ್ನು ಎತ್ತಿ, ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಿಗೆ ರೂ.289.10 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದ, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**38. ಬಾಗೇವಾಡಿ ಕೆರೆ ತುಂಬಿಸುವ ಯೋಜನೆ:**

ಈ ಯೋಜನೆಯಡಿ ಮಲಪ್ರಭಾ ನದಿಯಿಂದ 0.469 ಟಿ.ಎಂ.ಸಿ.ನೀರನ್ನೆತ್ತಿ ಬೆಳಗಾವಿ ಗ್ರಾಮಾಂತರ ಮತಕ್ಷೇತ್ರದಡಿ ಬರುವ 62 ಕೆರೆಗಳನ್ನು ತುಂಬಿಸಲು ಹಾಗೂ 47 ಗ್ರಾಮಗಳಿಗೆ ಕುಡಿಯುವ ನೀರನ್ನು ಪೂರೈಸಲು ಯೋಜಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಿಗೆ ರೂ.379.92 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**39. ತುಂಗಾ ಮೇಲ್ದಂಡೆ ಯೋಜನೆ:**

ತುಂಗಾ ಮೇಲ್ದಂಡೆ ಯೋಜನೆಯಡಿ ತುಂಗಾ ನದಿಗೆ ಅಡ್ಡಲಾಗಿ ಶಿವಮೊಗ್ಗ ತಾಲ್ಲೂಕಿನ ಗಾಜನೂರು ಬಳಿ ಹಾಲಿ ಇದ್ದ ತುಂಗಾ ಅಣೆಕಟ್ಟಿನಿಂದ 100 ಮೀ. ಕೆಳಭಾಗದಲ್ಲಿ ಅಣೆಕಟ್ಟೆ ನಿರ್ಮಿಸಿ ಮತ್ತು 258.00 ಕಿ.ಮೀ. ಉದ್ದದ ತುಂಗಾ ಮೇಲ್ದಂಡೆ ಮುಖ್ಯ ಕಾಲುವೆಯನ್ನು ನಿರ್ಮಿಸಲು ಯೋಜಿಸಲಾಗಿದೆ. ಸದರಿ ಯೋಜನೆಯಿಂದ ದಾವಣಗೆರೆ, ಶಿವಮೊಗ್ಗಾ, ಹಾವೇರಿ ಜಿಲ್ಲೆಗಳ 80,494 ಹೆ. ಪ್ರದೇಶಕ್ಕೆ ನೀರಾವರಿ ಸೃಷ್ಟಿಸಲು ಯೋಜಿಸಲಾಗಿದೆ. ತುಂಗಾ ಮೇಲ್ದಂಡೆ ಅಡಿ ಮುಖ್ಯ ಕಾಲುವೆ 258.00 ಕಿ.ಮೀ. ರಲ್ಲಿ 245.00 ಕಿ.ಮೀ. ವರೆಗೆ ಪೂರ್ಣಗೊಂಡಿದೆ. ಕಿ.ಮಿ. 246.00 ರಿಂದ ಕಿ.ಮಿ. 258.00 ರವರೆಗೆ ಕಾಮಗಾರಿಗಳು ಪ್ರಗತಿಯಲ್ಲಿದೆ. ಯೋಜನೆಯಡಿ 6 ವಿತರಣಾ ಕಾಲುವೆಗಳಿದ್ದು, ವಿತರಣಾ ಕಾಲುವೆ–6 ಹೊರತುಪಡಿಸಿ ಎಲ್ಲಾ ವಿತರಣಾ ಕಾಲುವೆಯ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

**40. ತುಂಗಾ ಅಣೆಕಟ್ಟು ಯೋಜನೆಯ ಆಧುನೀಕರಣ:**

ತುಂಗಾ ಆಣೆಕಟ್ಟಿನಿಂದ ಹಾಲಿ ನೀರಾವರಿಯಾಗುತ್ತಿರುವ ಎಡ ಮತ್ತು ಬಲದಂಡೆ ಕಾಲುವೆಗಳನ್ನು ಆಧುನೀಕರಣಗೊಳಿಸುವ ಸಲುವಾಗಿ ಈ ಯೋಜನೆಗೆ ದಿನಾಂಕ 28.06.2012ರಂದು ರೂ.309.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. 0 ರಿಂದ 32 ಕಿ.ಮಿ. ವರೆಗಿನ ಮೊದಲನೆ ಹಂತದ ಹಾಗು ಎರಡನೆ ಹಂತದ (32 ಕಿ.ಮಿ. ಯಿಂದ ಟೇಲ್ ಎಂಡ್) ಕಾಮಗಾರಿಗಳು ಪ್ರಗತಿಯಲ್ಲಿವೆ.

**41. ಬಸಾಪುರ ಏತ ನೀರಾವರಿ ಯೋಜನೆ:**

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ 13 ಹಳ್ಳಿಗಳ 2267 ಹೆ. ಜಮೀನಿಗೆ ನೀರೊದಗಿಸಲು ಬಸಾಪುರ ಗ್ರಾಮದ ಹತ್ತಿರ ವರದಾ ನದಿಯ ಬಲದಂಡೆಯಿಂದ ಎರಡು ಹಂತದಲ್ಲಿ ನೀರೆತ್ತುವ ಯೋಜನೆ ರೂಪಿಸಲಾಗಿದೆ. ಈ ಯೋಜನೆಗೆ 0.6 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿದೆ. ಈ ಯೋಜನೆಯ ಮೊದಲನೇ ಹಂತದ ಕಾಮಗಾರಿ ಪೂರ್ಣಗೊಂಡಿದ್ದು, 2ನೇ ಹಂತದ ಏತ ನೀರಾವರಿ ಕಾಮಗಾರಿಗಳಿಗೆ ಕಾಮಗಾರಿಗಳು ಪ್ರಗತಿಯಲ್ಲಿವೆ.

**42. ಉಬ್ರಾಣಿ–ಅಮೃತಾಪುರ ಸಂಯುಕ್ತ ಏತ ನೀರಾವರಿ ಯೋಜನೆ**

ಚನ್ನಗಿರಿ ತಾಲ್ಲೂಕಿನಲ್ಲಿ ಬರುವ 89 ಕೆರೆಗಳು ಹಾಗೂ ತರೀಕೆರೆ ತಾಲೂಕಿನಲ್ಲಿ ಬರುವ 57 ಕೆರೆಗಳಿಗೆ ನೀರು ತುಂಬಿಸುವುದು ಮತ್ತು ಕುಡಿಯುವ ನೀರಿಗಾಗಿ ಅಂತರ್ಜಲ ಆಭಿವೃದ್ಧಿ ಪಡಿಸಲು ಯೋಜಿಸಲಾಗಿದೆ. ಈ ಯೋಜನೆಯು 2 ಹಂತಗಳಿದ್ದು, ಪ್ರಸ್ತುತ ಎರಡು ಹಂತದ ಕಾಮಗಾರಿಗಳು ಪೂರ್ಣಗೊಂಡಿದ್ದು ಚಾಲನೆಗೊಳಿಸಲಾಗಿದೆ. ಮುಂದುವರೆದು ಪೈಪ್‌ಲೈನ್ ವಿಸ್ತರಿಸಿ ಕೆರೆ ತುಂಬಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.

**43. ಅಂಬ್ಲಿಗೊಳ ಹಾಗೂ ಅಂಜನಾಪುರ ಜಲಾಶಯ ಯೋಜನೆಗಳ ನಾಲಾ ಅಭಿವೃದ್ಧಿ:**

ಅಂಬ್ಲಿಗೊಳ ಜಲಾಶಯ ಯೋಜನೆಯನ್ನು 1954–65ರ ಅವಧಿಯಲ್ಲಿ ಕುಮುದ್ವತಿ ಹೊಳೆಗೆ ಸೇರುವ ಸಾಲೂರು ಹಳ್ಳಕ್ಕೆ ಅಡ್ಡವಾಗಿ ಅಂಬ್ಲಿಗೊಳದ ಬಳಿ ಸುಮಾರು 7,908–13 ಎಕರೆ ಜಮೀನಿಗೆ ಮುಂಗಾರು ಬೆಳೆಗೆ ನೀರೊದಗಿಸಲು ನಿರ್ಮಿಸಲಾಗಿದೆ. ಅಂಜನಾಪುರ ಜಲಾಶಯ ಯೋಜನೆಯನ್ನು 1927–30ರ ಅವದಿಯಲ್ಲಿ ಕುಮದ್ವತಿ ನದಿಗೆ ಅಡ್ಡಲಾಗಿ ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಗ್ರಾಮದ ಸಮೀಪ ಸುಮಾರು 6736 ಹೆಕ್ಟೇರು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ನಿರ್ಮಿಸಲಾಗೆದೆ. ಪ್ರಸ್ತುತ ಯೋಜನೆಗಳ ನಾಲಾ ಅಭಿವೃದ್ಧಿ ಕಾಮಗಾರಿಗಳನ್ನು ಒಟ್ಟು ರೂ.38.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

**44. ಕಚವಿ ಕೆರೆ ತುಂಬಿಸುವ ಯೋಜನೆ**

ಶಿವಮೊಗ್ಗ ಜಿಲ್ಲೆ ಸೊರಬ ತಾ|| ಕಚವಿ ಗ್ರಾಮದ ಬಳಿ ವರದಾ ನದಿಯಿಂದ 0.15 ಟಿಎಂಸಿ ನೀರನ್ನು ಎತ್ತಿ ಸೊರಬ ತಾಲ್ಲೂಕಿನ 11 ಗ್ರಾಮಗಳ 21 ಕೆರೆಗಳಿಗೆ ನೀರು ತುಂಬಿಸಿ ಗ್ರಾಮದ ನೀರಿನ ಅಭಾವ ನೀಗಿಸಲು ಈ ಯೋಜನೆಯನ್ನು ರೂಪಿಸಲಾಗಿದ್ದು ಯೋಜನಾ ಅಂದಾಜು ರೂ.16.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಸದರಿ ಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

**45. ಭದ್ರಾ ಕಾಲುವೆ ಜಾಲದ ಆಧುನೀಕರಣ**

ಭದ್ರಾ ಅಣೆಕಟ್ಟನ್ನು 1947–1959 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ, ಲಕ್ಕವಳ್ಳಿ ಗ್ರಾಮದ ಹತ್ತಿರ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಚಿಕ್ಕಮಗಳೂರು, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ ಅಡಿ ಬರುವ 105570 ಹೆ ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ಭದ್ರಾ ನಾಲಾ ಜಾಲವನ್ನು ಲೈನಿಂಗ್ ರಹಿತ ನಿರ್ಮಿಸಲಾಗಿದ್ದು, ಭದ್ರಾ ನಾಲೆಗಳ ಆಧುನೀಕರಣ ಕಾಮಗಾರಿಯನ್ನು 2008ರಲ್ಲಿ ಕೈಗೆತ್ತಿಕೊಳ್ಳಲಾಗಿರುತ್ತದೆ. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

**46. ಗೊಂದಿ ಕಾಲುವೆ ಜಾಲದ ಆಧುನೀಕರಣ**

ಗೊಂದಿ ಅಣೆಕಟ್ಟನ್ನು 1926ರಲ್ಲಿ ಶಿವಮೊಗ್ಗ ಜಿಲ್ಲೆಯ, ಭದ್ರಾವತಿ ನಗರದ ಹತ್ತಿರ ಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುತ್ತದೆ. ಸದರಿ ಅಣೆಕಟ್ಟಿನ ಒಟ್ಟಾರೆ ಸಂಗ್ರಹಣಾ ಸಾಮರ್ಥ್ಯ 0.37 ಟಿಎಂಸಿ ಇದ್ದು, 4600 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ನಾಲಾ ಜಾಲವನ್ನು ಲೈನಿಂಗ್ ರಹಿತ ನಿರ್ಮಿಸಲಾಗಿದ್ದು, ನಾಲಾ ಜಾಲಾವನ್ನು ಅಭಿವೃದ್ಧಿಪಡಿಸುವ

ಸಲುವಾಗಿ ಆಧುನೀಕರಣ ಕಾಮಗಾರಿಯನ್ನು ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಆರ್ಥಿಕ ನೆರವಿನಡಿ ಕೈಗೆತ್ತಿಕೊಂಡಿದ್ದು, ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ.

**47. ಹೋದಿರಾಯನಹಳ್ಳ ಪಥ ಪರಿವರ್ಥನ ಯೋಜನೆ**

ಹೋದಿರಾಯನಹಳ್ಳ ಪಥ ಪರಿವರ್ಥನ ಯೋಜನೆಯನ್ನು ಜಂಬದಹಳ್ಳ ಬಾಧಿತ ಪ್ರದೇಶಕ್ಕೆ ಅಂದರೆ 1296 ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಒದಗಿಸಲು ಜಂಬದಹಳ್ಳ ಸಮೀಪದಲ್ಲಿ ಸಮಾನಾಂತರವಾಗಿ ಹರಿದು ಹೋಗುತ್ತಿರುವ ಹೋದಿರಾಯನ ಹಳ್ಳದ ನೀರನ್ನು ತಿರುಗಿಸಿ ಜಂಬದಹಳ್ಳ ಜಲಾಶಯಕ್ಕೆ ಒದಗಿಸಲು ಉದ್ದೇಶಿಸಲಾಗಿದೆ. ಜೊತೆಗೆ 243 ಹೆಕ್ಟೇರ್ ಗಳಷ್ಟು ಪ್ರದೇಶ ಹೊಸದಾಗಿ ನೀರಾವರಿ ಸೌಲಭ್ಯ ಪಡೆಯಲಿದೆ. ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿವೆ.

**48. ರಾಜನಹಳ್ಳಿ ಕೆರೆ ಯೋಜನೆ**

ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ರಾಜನಹಳ್ಳಿ ಬಳಿ ತುಂಗಭದ್ರಾ ನದಿಯಿಂದ ನೀರನ್ನು ಮೇಲೆತ್ತಿ ದಾವಣಗೆರೆ, ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕಿನ 22 ಕೆರೆಗಳನ್ನು ತುಂಬಿಸುವ ಯೋಜನೆಯ ಕಾಮಗಾರಿಯ ಕೈಗೊಳ್ಳಲು ರೂ.100 ಕೋಟಿಗಳ ಮೊತ್ತಕ್ಕೆ ಅನುಮೋದನೆ ದೊರೆತಿರುತ್ತದೆ. ಸದರಿ ಯೋಜನೆಯನ್ನು ಟರ್ನ್ ಕೀ ಆಧಾರದ ಮೇಲೆ ಟೆಂಡರ್ ವಹಿಸಲಾಗಿದ್ದು, ಯೋಜನಾ ಕಾಮಗಾರಿಗಳು ಪೂರ್ಣಗೊಂಡು ಪ್ರಾಯೋಗಿಕವಾಗಿ ಚಾಲನೆಗೊಳಿಸಲಾಗಿದೆ. ಮುಂದುವರೆದು ಯೋಜನೆಯನ್ನು ವಿಸ್ತರಿಸಿ ಹೆಚ್ಚುವರಿಯಾಗಿ ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ದೊಡ್ಡ ಕೆರೆ, ಸಣ್ಣ ಕೆರೆ ಹಾಗೂ ಎಮ್ಮೆಹಟ್ಟಿ ಕೆರೆಗಳಿಗೆ ನೀರನ್ನು ತುಂಬಿಸಲು ಉದೇಶಿಸಿದ್ದು, ಮೊತ್ತ ರೂ.14.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಮುಂದುವರೆದು ಸದರಿ ಯೋಜನೆಯಡಿ ಹೆಚ್ಚುವರಿಯಾಗಿ ವಿಯರ್ ನಿರ್ಮಾಣವನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.

**49. ಕಾಗಿನೆಲೆ ಗ್ರಾಮದ ಕನಕ ಸರೋವರದ (ದೊಡ್ಡಕೆರೆ) ಅಭಿವೃದ್ಧಿ**

ಕಾಗಿನೆಲೆ ಗ್ರಾಮದ ಕನಕ ಸರೋವರ (ದೊಡ್ಡಕೆರೆ) ಸುಮಾರು 280 ಎಕರೆ ವಿಸ್ತೀರ್ಣ ಹೊಂದಿದ್ದು, ಸಂತ ಕನಕದಾಸರು ಪ್ರತಿನಿತ್ಯ ಈ ಕೆರೆಯಲ್ಲಿ ಮಿಂದು ಶ್ರೀ ಆದಿಕೇಶವನನ್ನು ಪೂಜಿಸುತ್ತಿದ್ದರೆಂಬ ಇತಿಹಾಸವಿದ್ದು, ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೆರೆ ಏರಿ ಅಭಿವೃದ್ಧಿ, ದ್ವೀಪ ನಿರ್ಮಾಣ, ಉದ್ಯಾನವನ, ಸಂಗೀತ ಕಾರಂಜಿ, ಪಾತ್‌ವೇ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲು ರೂ.14.15 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**50. ವಾರಾಹಿ ನೀರಾವರಿ ಯೋಜನೆ**

ಪಶ್ಚಿಮಾಭಿಮುಖವಾಗಿ ಹರಿಯುವ ವಾರಾಹಿ ನದಿಗೆ ಉಡುಪಿ ಜಿಲ್ಲೆ ಕುಂದಾಪುರ ತಾಲೂಕಿನ ಸಿದ್ದಾಪುರದ ಬಳಿ ಹೊರಿಯಬ್ಬೆ ಎಂಬಲ್ಲಿ ಡೈವರ್ಶನ್ ವಿಯರ್‌ನ್ನು ನಿರ್ಮಿಸಲಾಗಿದೆ. ಸದರಿ ಯೋಜನೆಯಿಂದ ಕುಂದಾಪುರ ತಾಲೂಕಿನ 33 ಗ್ರಾಮಗಳು ಮತ್ತು ಉಡುಪಿ ತಾಲೂಕಿನ 35 ಗ್ರಾಮಗಳ ಒಟ್ಟು ಸುಮಾರು 15,702 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಗುರಿ ಹೊಂದಲಾಗಿದೆ. ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**51. ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ**

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಯಡಿ ಸಾಸ್ವೆಹಳ್ಳಿ ಹತ್ತಿರ ತುಂಗಭದ್ರಾ ನದಿಯಿಂದ ಚನ್ನಗಿರಿ ತಾಲ್ಲೂಕಿನ ಕಸಬಾ ಹೋಬಳಿಯ ಚನ್ನಗಿರಿ ವಿಧಾನಸಭಾ ಕ್ಷೇತ್ರದ 27 ಕೆರೆಗಳಿಗೆ, ದಾವಣಗೆರೆ ತಾಲ್ಲೂಕಿನ ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 11 ಕೆರೆಗಳಿಗೆ ಹೊನ್ನಾಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 4 ಕೆರೆಗಳಿಗೆ ಮತ್ತು ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ 1 ಕೆರೆಗೆ ನೀರನ್ನು ತುಂಬಿಸಲು ಪ್ರಸ್ತಾಪಿಸಲಾಗಿರುತ್ತದೆ. ಎರಡನೇ ಹಂತದಲ್ಲಿ ಚನ್ನಗಿರಿ ತಾಲ್ಲೂಕಿನ ಶಾಂತಿಸಾಗರ ಕೆರೆಯಿಂದ ನೀರನ್ನೆತ್ತಿ ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರು ಹೋಬಳಿಯ 24 ಕೆರೆಗಳಿಗೆ, ದಾವಣಗೆರೆ ತಾಲ್ಲೂಕಿನ ಮಾಯಕೊಂಡ ವಿಧಾನಸಭಾ ಕ್ಷೇತ್ರದ 19 ಕೆರೆಗಳಿಗೆ ಮತ್ತು ಚಿತ್ರದುರ್ಗ ತಾಲ್ಲೂಕಿನ 3 ಕೆರೆಗಳಿಗೆ ಹಾಗೂ ಹೊಳಲ್ಕೆರೆ ವಿಧಾನ ಸಭಾ ಕ್ಷೇತ್ರದ 3 ಕೆರೆಗಳಿಗೆ ನೀರನ್ನು ತುಂಬಿಸಲಾಗುವುದು. ಸದರಿ ಕಾಮಗಾರಿಯ ರೂ.415.68 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**52. ರಾಣೆಬೆನ್ನೂರು ದೊಡ್ಡಕೆರೆ ಹಾಗೂ ಸುತ್ತಮುತ್ತಲಿನ 3 ಕೆರೆಗಳನ್ನು ತುಂಬಿಸುವ ಯೋಜನೆ**

ಸದರಿ ಯೋಜನೆಯಡಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ರಾಣೆಬೆನ್ನೂರು ದೊಡ್ಡಕೆರೆ ಹಾಗೂ ಸುತ್ತಮುತ್ತಲಿನ 3 ಕೆರೆಗಳನ್ನು ತುಂಗಭದ್ರಾ ನದಿಯಿಂದ ತುಂಬಿಸಲು ಯೋಜಿಸಲಾಗಿದೆ. ಮಳೆಯ ಅಭಾವದಿಂದ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.31.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**53. ಹರಪ್ಪನಹಳ್ಳಿ ತಾಲ್ಲೂಕಿನ 50 ಕೆರೆಗಳನ್ನು ತುಂಬಿಸುವ ಯೋಜನೆ**

ಈ ಯೋಜನೆಯಡಿ ಬರಪೀಡಿತ ಹರಪ್ಪನಹಳ್ಳಿ ತಾಲ್ಲೂಕಿನ 50 ಕೆರೆಗಳಿಗೆ ಚಿಕ್ಕಬಿದರೆ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಗೆ ರೂ.227.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**54. ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ಕೆರೆಯಿಂದ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಬಹುಗ್ರಾಮ ಕೆರೆಗಳಿಗೆ ಕುಮುದ್ವತಿ ನದಿಯಿಂದ ನೀರನ್ನು ಎತ್ತಿ ತುಂಬಿಸುವ ಯೋಜನೆ**

ಈ ಯೋಜನೆಯೂ ಹಿರೇಕೆರೂರು ತಾಲ್ಲೂಕಿನ ತಿಪ್ಪಾಯಿಕೊಪ್ಪ ಗ್ರಾಮದ ಹತ್ತಿರ ಜಾಕ್‌ವೆಲ್ ಹಾಗೂ ಪಂಪ್ ಹೌಸನ್ನು ನಿರ್ಮಿಸಿ, ಕುಮುದ್ವತಿ ನದಿಯಿಂದ 0.067 ಟಿ.ಎಂ.ಸಿ ನೀರನ್ನೆತ್ತಿ ಹಿರೇಕೆರೂರು ಪಟ್ಟಣದ ದುರ್ಗಾದೇವಿ ಹಾಗೂ ಸುತ್ತಮುತ್ತಲಿನ 8 ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸುವ ಯೋಜನೆಯಾಗಿರುತ್ತದೆ. ಸದರಿ ಯೋಜನೆಯ ವಿವರವಾದ ಯೋಜನಾ ವರದಗೆ ರೂ.140.00 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**55. ಮಡ್ಲೂರು ಏತ ನೀರಾವರಿ ಯೋಜನೆ**

ಈ ಯೋಜನೆಯಡಿ ಹಾನಗಲ್ ತಾಲ್ಲೂಕಿನ ತಿಳುವಳ್ಳಿ ಗ್ರಾಮದ ಹತ್ತಿರ ಹೊಂಕನ ಬ್ಯಾರೇಜಿನ ಮೇಲ್ಭಾಗದಲ್ಲಿ ಜಾಕ್‌ವೇಲ್ ಮತ್ತು ಪಂಪ್‌ಹೌಸ್ ನಿರ್ಮಿಸಿ, ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ 13 ಕೆರೆ ಹಾಗೂ ಬ್ಯಾಡಗಿ ತಾಲ್ಲೂಕಿನ 2 ಕೆರೆಗಳಿಗೆ ವರದಾ ನದಿಯಿಂದ ನೀರನ್ನೆತ್ತಿ ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಲು ಯೋಜಿಸಲಾಗಿರುತ್ತದೆ. ಯೋಜನೆಯ ರೂ.38.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಅಕ್ಟೋಬರ್-2017ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**56. ಗುಡ್ಡದಮಾದಾಪುರ ಏತ ನೀರಾವರಿ ಯೋಜನೆ:**

ಗುಡ್ಡದಮಾದಾಪುರ ಏತ ನೀರಾವರಿ ಯೋಜನೆಯನ್ನು ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲ್ಲೂಕಿನ 13 ಕೆರೆಗಳಿಗೆ ತುಂಗಭದ್ರಾ ನದಿಯಿಂದ 0.037 ಟಿ.ಎಂ.ಸಿ. ನೀರನ್ನತ್ತಿ ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.23.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಫೆಬ್ರವರಿ-2018ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**57. ಅಸುಂಡಿ ಹಾಗೂ ಸುತ್ತಮುತ್ತಲಿನ 17 ಕೆರೆಗಳನ್ನು ತುಂಬಿಸುವ ಯೋಜನೆ**

ಹಾವೇರಿ ಜಿಲ್ಲೆಯ ರಾಣೆಬೆನ್ನೂರು, ಬ್ಯಾಡಗಿ ಮತ್ತು ಹಿರೇಕೆರೂರು ತಾಲ್ಲೂಕಿನ ಅಸುಂಡಿ ಹಾಗೂ ಸುತ್ತಮುತ್ತಲಿನ 17 ಕೆರೆಗಳನ್ನು ಕುಮುದ್ವತಿ ನದಿಯಿಂದ ನೀರನ್ನು ಏತ್ತಿ ತುಂಬಿಸುವ ಅಸುಂಡಿ ಏತ ನೀರಾವರಿ ಯೋಜನೆಯ ರೂ.79.80 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಡಿಸೆಂಬರ್-2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**58. ಉತ್ತರ ಕನ್ನಡ ಜಿಲ್ಲೆಯ ಶಿರಾಸಿ ತಾಲ್ಲೂಕಿನ ಬನವಾಸಿ ಹೋಬಳಿಯ 32 ಕೆರೆಗಳಿಗೆ ವರದಾ ನದಿಯಿಂದ ನೀರನ್ನೆತ್ತಿ ತುಂಬಿಸುವ ಯೋಜನೆ**

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿಯ 32 ಕೆರೆಗಳನ್ನು ವರದಾ ನದಿಯಿಂದ ನೀರನ್ನು ತುಂಬಿಸಿ ಕೃಷಿ ಚಟುವಟಿಕೆ, ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರಣ ಮಾಡಲು ಉದ್ದೇಶಿಸಲಾಗಿದೆ. ಶಿರಸಿ ತಾಲ್ಲೂಕಿನಲ್ಲಿ ಕೆರೆಗಳ ಒಳಹರಿವಿನ ಅಭಾವದಿಂದ ನಿಗದಿತ ಪ್ರಮಾಣದ ನೀರಿನ ಸಂಗ್ರಹಣೆಯಾಗದೇ ಬಹುಪಾಲು ಕೆರೆಗಳು ಬರಿದಾಗುತ್ತಿದ್ದು, ಅವಲಂಬಿತ ನೀರಾವರಿ ಪ್ರದೇಶದ ರೈತರು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದು, ಈ ಪ್ರದೇಶಗಳಲ್ಲಿರುವ ಕೊಳವೆಬಾವಿಗಳು ಕೂಡಾ ಬರಿದಾಗುತ್ತಿರುವ ಹಿನ್ನಲೆಯಲ್ಲಿ ವರದಾ ನದಿಯಿಂದ 0.107 ಟಿ.ಎಂ.ಸಿ. ನೀರನ್ನೆತ್ತಿ ಸದರಿ ಕೆರೆಗಳಿಗೆ ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.62.58 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಡಿಸೆಂಬರ್–2017 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**59. ಹೊಸಹಳ್ಳಿ ಕೆರೆ ತುಂಬಿಸುವ ಯೋಜನೆ**

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕಿನ 75 ಕೆರೆಗಳಿಗೆ ಮತ್ತು ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಅಣೆಕಟ್ಟೆಗೆ ಒಳಹರಿವಿನ ಅಭಾವದಿಂದ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು ಸದರಿ ನೀರಿನ ಬವಣೆಯನ್ನು ನೀಗಿಸಲು, ಅಂತರ್ಜಲ ಮಟ್ಟ ವೃದ್ಧಿಸಲು ಮತ್ತು ಶಿಕಾರಿಪುರ ಮತ್ತು ಶಿರಾಳಕೊಪ್ಪ ತಾಲ್ಲೂಕಿನ ಪಟ್ಟಣಗಳ ಹಾಗೂ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಈ ಯೋಜನೆಯನ್ನು ಕೈಗೊಳ್ಳಲ್ಲು ಉದ್ದೇಶಿಸಲಾಗಿದೆ. ಆದ್ದರಿಂದ ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತುಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.250.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಆಗಸ್ಟ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**60. ಮೂಗೂರು ಕೆರೆ ತುಂಬಿಸುವ ಯೋಜನೆ**

ಮಳೆಯ ಅಭಾವದಿಂದ ಸೊರಬ ತಾಲ್ಲೂಕಿನ ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು ಸದರಿ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಈ ಯೋಜನೆಯನ್ನು ಕೈಗೊಳ್ಳಲ್ಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಸೊರಬ ತಾಲ್ಲೂಕಿನ ಮೂಗೂರು ಗ್ರಾಮದ ಹತ್ತಿರ ವರದಾ ನದಿಯಿಂದ ಮಳೆಗಾಲದ 3 ತಿಂಗಳ ಅವಧಿಯಲ್ಲಿ 0.22ಟಿ.ಎಂ.ಸಿ. ನೀರನ್ನೆತ್ತಿ ಸೊರಬ ತಾಲ್ಲೂಕಿನ 31 ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಲು ಯೋಜಿಸಿದೆ. ಯೋಜನೆಯ ರೂ.105.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಆಗಸ್ಟ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**61. ಮೂಡಿ ಕೆರೆ ತುಂಬಿಸುವ ಯೋಜನೆ**

ಮಳೆಯ ಅಭಾವದಿಂದ ಸೊರಬ ತಾಲ್ಲೂಕಿನ ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳಲ್ಲಿ ನಿಗದಿತ ಪ್ರಮಾಣದಲ್ಲಿ ನೀರಿನ ಸಂಗ್ರಹಣೆಯಾಗದೇ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು ಸದರಿ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಈ ಯೋಜನೆಯನ್ನು ಕೈಗೊಳ್ಳಲ್ಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಸೊರಬ ತಾಲ್ಲೂಕಿನ ಮೂಡಿ ಗ್ರಾಮದ ಹತ್ತಿರ ವರದಾ ನದಿಯಿಂದ ಮಳೆಗಾಲದ 3 ತಿಂಗಳ ಅವಧಿಯಲ್ಲಿ 0.35ಟಿ.ಎಂ.ಸಿ. ನೀರನ್ನೆತ್ತಿ ಸೊರಬ ತಾಲ್ಲೂಕಿನ 66 ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಲು ಯೋಜಿಸಿದೆ. ಯೋಜನೆಯ ರೂ.285.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಆಗಸ್ಟ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**62. ಉಡುಗಣಿ–ತಾಳಗುಂದ–ಹೊಸೂರು ಹೋಬಳಿಗಳ ಕೆರೆಗಳನ್ನು ತುಂಬಿಸುವ ಯೋಜನೆ**

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಉಡುಗಣಿ–ತಾಳಗುಂದ–ಹೊಸೂರು ಹೋಬಳಿಗಳ 182 ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳನ್ನು ಪುರದಕೆರೆ ಗ್ರಾಮದ ಹತ್ತಿರ ತುಂಗಭದ್ರಾ ನದಿಯಲ್ಲಿ 04 ತಿಂಗಳಲ್ಲಿ ಹರಿಯುವ ನೀರಿನಿಂದ 1.533 ಟಿ.ಎಂ.ಸಿ. ನೀರನ್ನೆತ್ತಿ ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.850.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಸೆಪ್ಟೆಂಬರ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**63. ಜಗಲೂರು ತಾಲ್ಲೂಕಿನ 46 (ಒಟ್ಟು 53) ಸಣ್ಣ ನೀರಾವರಿ/ಜಿಲ್ಲಾ ಪಂಚಾಯತ್ ಕೆರೆಗಳನ್ನು ತುಂಬಿಸುವ ಯೋಜನೆ**

ದಾವಣಗೆರೆ ಜಿಲ್ಲೆಯ, ಜಗಳೂರು ತಾಲ್ಲೂಕಿನಲ್ಲಿರುವ ಒಟ್ಟಾರೆ 53 ಕೆರೆಗಳಿಗೆ ಒಳಹರಿವಿನ ಅಭಾವದಿಂದ ನೀರಿನ ಸಂಗ್ರಹಣೆಯಾಗದೇ ಇರುವುದರಿಂದ ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಹರಿಹರ ತಾಲ್ಲೂಕಿನ ದೀಟೂರು ಗ್ರಾಮದ ಹತ್ತಿರ ಜಾಕ್‌ವೆಲ್ ಹಾಗೂ ಪಂಪ್ ಹೌಸನ್ನು ನಿರ್ಮಿಸಿ, ತುಂಗಭದ್ರಾ ನದಿಯಿಂದ 1.37 ಟಿಎಂಸಿ ನೀರನ್ನೆತ್ತಿ ಸದರಿ 53 ಕೆರೆಗಳನ್ನು ತುಂಬಿಸಲು ಯೋಜಿಸಿದೆ. ಯೋಜನೆಯ ರೂ.660.00 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಸೆಪ್ಟೆಂಬರ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**64. ಭರಮಸಾಗರ ಹೋಬಳಿಯ 38 ಕೆರೆಗಳನ್ನು ಮತ್ತು ದಾವಣಗೆರೆ ತಾಲ್ಲೂಕಿನ 1 (ಒಂದು) ಕೆರೆಯನ್ನು ತುಂಬಿಸುವ ಯೋಜನೆ**

ಚಿತ್ರದುರ್ಗ ಜಿಲ್ಲೆಯ, ಭರಮಸಾಗರ ಹೋಬಳಿಯ 38 ಕೆರೆಗಳಿಗೆ ಮತ್ತು ದಾವಣಗೆರೆ ತಾಲ್ಲೂಕಿನ ಒಂದು ಕೆರೆಗೆ, ಒಟ್ಟಾರೆ 39 ಕೆರೆಗಳಿಗೆ ಒಳಹರಿವಿನ ಅಭಾವದಿಂದ ನೀರಿನ ಸಂಗ್ರಹಣೆಯಾಗದೇ ಇರುವುದರಿಂದ ಸದರಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸಿ ಈ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಹರಿಹರ ತಾಲ್ಲೂಕಿನ ರಾಜನಹಳ್ಳಿ ಗ್ರಾಮದ ಹತ್ತಿರ ಜಾಕ್‌ವೆಲ್ ಹಾಗೂ ಪಂಪ್ ಹೌಸನ್ನು ನಿರ್ಮಿಸಿ, ತುಂಗಭದ್ರಾ ನದಿಯಿಂದ 0.514 ಟಿಎಂಸಿ ನೀರನ್ನೆತ್ತಿ ಸದರಿ 39 ಕೆರೆಗಳನ್ನು ತುಂಬಿಸುವ ಯೋಜಿಸಿದೆ. ಯೋಜನೆಯ ರೂ.522.11 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಸೆಪ್ಟೆಂಬರ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**65. ಸೌಕೂರು ಏತ ನೀರಾವರಿ ಯೋಜನೆ**

ಸದರಿ ಯೋಜನೆಯಡಿ ಕುಂದಾಪುರ ತಾಲ್ಲೂಕಿನ ಬಳ್ಕೂರು ಎಂಬಲ್ಲಿ ವಾರಾಹಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಉಪ್ಪು ನೀರುತಡೆ ಅಣೆಕಟ್ಟಿನ ಮೇಲ್ಭಾಗದಲ್ಲಿ ಸೌಕೂರು ಗ್ರಾಮದ ಹತ್ತಿರ ಏತ ನೀರಾವರಿ ನಿರ್ಮಿಸಿ 0.589 ಟಿಎಂಸಿ ನೀರನ್ನು ಏರುಕೊಳವೆ ಮುಖಾಂತರ ಹರಿಸಿ ಉಡುಪಿ ಜಿಲ್ಲೆ, ಕುಂದಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಸೌಕೂರು, ಕರ್ಕುಂಜೆ, ಕೆಂಚನೂರು, ದೇವಲ್ಕುಂದಕನ್ಯಾನಾ ಮತ್ತು ಸುತ್ತಮುತ್ತಲಿನ ಗ್ರಾಮಗಳ 1350 ಹೆಕ್ಟೇರ್ ಭೂಮಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ. ಯೋಜನೆಯ ರೂ.73.71 ಕೋಟಿಗಳ ಯೋಜನಾ ವರದಿಗೆ ಸರ್ಕಾರದಿಂದ ಆಗಸ್ಟ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**66. ಆಣುರು ಕೆರೆ ತುಂಬಿಸುವ ಯೋಜನೆ:**

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಆಣುರು ಹಾಗೂ ಸುತ್ತಮುತ್ತಲಿನ 30 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಿ ಆ ಭಾಗದ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಚೌಡದಾನಪುರ ಹತ್ತಿರ ಜಾಕ್‌ವೇಲ್ ಮತ್ತು ಪಂಪ್‌ಹೌಸ್ ನಿರ್ಮಿಸಿ, ತುಂಗಭದ್ರಾ ನದಿಯಿಂದ 0.50 ಟಿ.ಎಂ.ಸಿ ನೀರನ್ನೆತ್ತಿ 18 ಹಳ್ಳಿಗಳ 30 ಕೆರೆಗಳನ್ನು ತುಂಬಿಸಲು ಯೋಜಿಸಿದೆ. ಯೋಜನೆಯ ರೂ.212.00 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್–2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**67. ಬುಡಪ್ಪನಹಳ್ಳಿ ಕೆರೆ ತುಂಬಿಸುವ ಯೋಜನೆ:**

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಬುಡಪ್ಪನಹಳ್ಳಿ ಹಾಗೂ ಸುತ್ತಮುತ್ತಲಿನ 17 ಕೆರೆಗಳಿಗೆ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಿ ಈ ಭಾಗದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದೇಶಿಸಲಾಗಿದೆ. ಸದರಿ ಯೋಜನೆಯಡಿ ಕೋಟಿಹಾಳ್ ಹತ್ತಿರ ಜಾಕ್‌ವೇಲ್ ಮತ್ತು ಪಂಪ್‌ಹೌಸ್ ನಿರ್ಮಿಸಿ, ತುಂಗಭದ್ರಾ ನದಿಯಿಂದ 0.30 ಟಿ.ಎಂ.ಸಿ ನೀರನ್ನು ಎತ್ತಿ 17 ಕೆರೆಗಳನ್ನು ತುಂಬಿಸಲು ಯೋಜಿಸಿದೆ.ಯೋಜನೆಯ ರೂ.157.00 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**68. ಬಾಳಂಬೀಡು ಕೆರೆ ತುಂಬಿಸುವ ಯೋಜನೆ:**

ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಬಾಳಂಬೀಡ ಹಾಗೂ ಇತರೆ ಗ್ರಾಮಗಳ ಸಣ್ಣ ನೀರಾವರಿ / ಜಿಲ್ಲಾ ಪಂಚಾಯತಿಯ 162 ಕೆರೆಗಳನ್ನು ವರದಾ ನದಿಯಿಂದ ನೀರನ್ನೆತ್ತಿ ಅವುಗಳ ಸಾಮರ್ಥ್ಯದ ಶೇ.50% ರಷ್ಟು ತುಂಬಿಸಿ ಆ ಭಾಗದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಮತ್ತು ಅಂತರ್ಜಲ ಮಟ್ಟ ವೃದ್ಧಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.386.55 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**69. ಹಿರೇಕೌಶಿ ಕೆರೆ ತುಂಬಿಸುವ ಯೋಜನೆ:**

ಹಾವೇರಿ ಜಿಲ್ಲೆಯ ಹಾನಗಲ್ಲ ತಾಲ್ಲೂಕಿನ ಹಿರೇಕೌಶಿ ಹಾಗೂ ಇತರೆ ಗ್ರಾಮಗಳ 77 ಸಣ್ಣ ನೀರಾವರಿ/ಜಿಲ್ಲಾ ಪಂಚಾಯಿತಿ ಕೆರೆಗಳನ್ನು ಅವುಗಳ ಸಾಮರ್ಥ್ಯದ ಶೇ.50ರಷ್ಟು ತುಂಬಿಸಿ ಆ ಭಾಗದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಹಾಗೂ ಅಂತರ್ಜಲ ಮಟ್ಟ ವೃದ್ಧಿಸಲು ವರದಾ ನದಿಯಿಂದ ನೀರನ್ನೆತ್ತಿ ತುಂಬಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.117.55 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**70. ಸರ್ವಜ್ಞ ಕೆರೆ ತುಂಬಿಸುವ ಯೋಜನೆ:**

ಹಾವೇರಿ ಜಿಲ್ಲೆಯ ಹಿರೇಕೆರೂರು ಮತ್ತು ರಟ್ಟಿಹಳ್ಳಿ ವ್ಯಾಪ್ತಿಯಲ್ಲಿ ಬರುವ 77 ಕೆರೆಗಳು ನದಿಯಿಂದ ಎತ್ತರ ಪ್ರದೇಶದಲ್ಲಿರುವುದರಿಂದ ಅಂತರ್ಜಲ ಮಟ್ಟ ಹೆಚ್ಚಿಸಲು ಮತ್ತು ಕುಡಿಯುವ ನೀರಿನ ಬವಣೆ ನಿವಾರಣೆಗಾಗಿ ಸದರಿ ಕೆರೆಗಳಿಗೆ ನೀರಿನ ಅತಿ ಅವಶ್ಯಕತೆ ಇದ್ದು, ಈ ಕೆರೆಗಳಿಗೆ ಉಕ್ಕಾಡಗಾತ್ರಿ ಹತ್ತಿರ ತುಂಗಭದ್ರಾ ನದಿಯಿಂದ 0.417 ಟಿಎಂಸಿ ನೀರನ್ನೆತ್ತಿ ಸದರಿ ಕೆರೆಗಳನ್ನು ತುಂಬಿಸಲು ಉದ್ದೇಶಿಸಲಾಗಿದೆ. ಯೋಜನೆಯ ರೂ.185.00 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

**71. ಕಸಬಾ (ಕಲ್ಲುವಡ್ಡುಹಳ್ಳ) ಏತ ನೀರಾವರಿ ಯೋಜನೆ:**

ಸದರಿ ಯೋಜನೆಯಡಿ ಕುಮುದ್ವತಿ ನದಿಯಿಂದ ಏತ ನೀರಾವರಿ ಮೂಲಕ ಶಿಕಾರಿಪುರ ತಾಲ್ಲೂಕು ಕಸಬಾ ಹೋಬಳಿಯ ಮತ್ತು ಸೊರಬ ತಾಲ್ಲೂಕಿನ ಒಟ್ಟು 17 ಗ್ರಾಮಗಳ ಸುಮಾರು 3,430 ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯಒದಗಿಸುವ ಜೊತೆಗೆ 41 ಕೆರೆಗಳಿಗೆ ನೀರು ತುಂಬಿಸಲು ಯೋಜಿಸಲಾಗಿದೆ. ಯೋಜನೆಯ ರೂ.125.17 ಕೋಟಿಗಳ ಯೋಜನಾ ವರದಿಗೆ ಆಗಸ್ಟ್-2019 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

**72. ಎಣ್ಣೆಹೊಳೆ ಏತ ನೀರಾವರಿ ಯೋಜನೆ:**

ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಜೇಕರ್ ಗ್ರಾಮದ ಬಳಿ ವೆಂಟೆಡ್ ಡ್ಯಾಂ (ಬ್ಯಾರೇಜ್) ನಿರ್ಮಿಸಿ, ಅಜೇಕರ್, ಮರ್ನೆ, ಕೊರಂಜಿ ಬೈಲು, ಬೊಲತೊಟ್ಟ, ಹಿರ್ಗನ, ದೆವಸೆ, ಮುಂಡಾಲ್, ಹೆರ್ಮಡೆ ಗ್ರಾಮಗಳ 1500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಯೋಜನೆಯ ರೂ.108.00 ಕೋಟಿಗಳ ಯೋಜನಾ ವರದಿಗೆ ಅಕ್ಟೋಬರ್ 2019ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**73. ಬೆಣ್ಣೆತೋರಾ ಯೋಜನೆ**

ಬೆಣ್ಣೆತೋರಾ ಯೋಜನೆಯ ಆಣೆಕಟ್ಟು ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಹೆರೂರ ಗ್ರಾಮದ ಬೆಣ್ಣೆತೋರಾ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಸದರಿ ಯೋಜನೆಯ ಎರಡು ಕಾಲುವೆಗಳ ಅಡಿಯಲ್ಲಿ ಕಲಬುರ್ಗಿ ಜಿಲ್ಲೆಯ 20,234 ಹೆ. ಪ್ರದೇಶವು ನೀರಾವರಿಗೊಳಪಟ್ಟಿದ್ದು 5.75 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದು. ಯೋಜನೆಯ ಆಣೆಕಟ್ಟಿನ ಏರಿಯ (ಎಂಬ್ಯಾಂಕ್‌ಮೆಂಟ್) ಕೆಲಸ ಹಾಗೂ ಸ್ಪಿಲ್‌ವೇ ಕೆಲಸ ಪೂರ್ಣಗೊಂಡಿದ್ದು 2001ರಿಂದ ನೀರನ್ನು ಶೇಖರಿಸಲಾಗುತ್ತಿದೆ. ಸದರಿ ಯೋಜನೆಯ ಕಾಲುವೆ ಜಾಲಗಳ ಆಧುನೀಕರಣ ಕಾಮಗಾರಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ರೂ.150.00 ಕೋಟಿಗಳಿಗೆ ನೀಡಲಾಗಿರುತ್ತದೆ. ಪ್ರಸ್ತುತ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುತ್ತದೆ.

**74. ಭೀಮಾ ಏತ ನೀರಾವರಿ ಯೋಜನೆ**

ಭೀಮಾ ಏತ ನೀರಾವರಿ ಯೋಜನೆ ಅಡಿ ಕಲಬುರ್ಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಸೊನ್ನ ಗ್ರಾಮದ ಬಳಿ ಬ್ಯಾರೇಜ ನಿರ್ಮಿಸಲಾಗಿದ್ದು, ಸ್ಪಿಲ್‌ವೇ ಮುಖಾಂತರ 9 ಲಕ್ಷ ಕ್ಯೂಸೆಕ್ಸ ನೀರು ಹರಿಸಬಹುದಾಗಿದೆ. ಇದರಿಂದ 24292 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ. ಈ ಯೋಜನೆ ಅಡಿಯಲ್ಲಿ 6.00 ಟಿ.ಎಂ.ಸಿ. ನೀರಿನ ಬಳಕೆಯಾಗಲಿದೆ. ಸದರಿ ಯೋಜನೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

**75. ಗಂಡೋರಿನಾಲಾ ಆಧುನೀಕರಣ ಯೋಜನೆ**

ಗಂಡೋರಿನಾಲಾ ಯೋಜನೆಯಡಿ ಕಲಬುರಗಿ ತಾಲ್ಲೂಕಿನ ಬೆಳಕೋಟಾ ಗ್ರಾಮದ ಹತ್ತಿರ ಆಣೆಕಟ್ಟು ನಿರ್ಮಿಸಿ ಬರಪೀಡಿತ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 7943 ಹೆ ಪ್ರದೇಶಕ್ಕೆ 1.99 ಟಿ.ಎಂ.ಸಿ. ನೀರನ್ನು ಬಳಸಿ ನೀರಾವರಿ ಸೌಲಭ್ಯ ಒದಗಿಸಲಾಗಿರುತ್ತದೆ. ಮುಂದುವರೆದು, ಯೋಜನೆಯ ಮುಖ್ಯ ಕಾಲುವೆ ಸುಮಾರು 15 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಗಂಡೋರಿನಾಲಾ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.92.00 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**76. ಕೆಳದಂಡೆ ಮುಲ್ಲಾಮಾರಿ ಯೋಜನೆಯ ಕಾಲುವೆ ಜಾಲದ ಆಧುನೀಕರಣ**

ಕೆಳದಂಡೆ ಮುಲ್ಲಾಮಾರಿ ಯೋಜನೆಯಡಿ 1972ರಲ್ಲಿ ಕೃಷ್ಣಾ ಕೊಳ್ಳದ ಕಾಗಿಣಾ ನದಿಯ ಉಪನದಿಯಾದ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಿ, 2.61 ಟಿ.ಎಂ.ಸಿ. ನೀರಿನ ಬಳಕೆಯೊಂದಿಗೆ ಚಿಂಚೋಳಿ ತಾಲ್ಲೂಕಿನ 9713 ಹೆಕ್ಟೇರ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲುಗಿರುತ್ತದೆ. ಮುಂದುವರೆದು, ಯೋಜನೆಯ ಪೂರ್ಣಗೊಂಡು ಬಹಳ ವರ್ಷಗಳಾಗಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಕೆಳದಂಡೆ ಮುಲ್ಲಾಮಾರಿ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.117.00 ಕೋಟಿಗಳಲ್ಲಿ ಕೈಗೆತ್ತಿಕೊಳಲ್ಲು ಉದ್ದೇಶಿಸಿದ್ದು ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**77. ಅಮರ್ಜಾ ಯೋಜನೆ**

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ಸಂಗೋಳಗಿ ಗ್ರಾಮದ ಹತ್ತಿರ ಅಮರ್ಜಾ ನದಿಗೆ ಅಡ್ಡಲಾಗಿ ಆಣೆಕಟ್ಟು ನಿರ್ಮಿಸಿ 1.554 ಟಿ.ಎಂ.ಸಿ. ನೀರನ್ನು ಸಂಗ್ರಹಿಸಿ ಆಳಂದ ಹಾಗೂ ಅಫಜಲಪೂರ ತಾಲೂಕಿನ ಗ್ರಾಮಗಳ 8903 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಅಣೆಕಟ್ಟು ನಿರ್ಮಾಣ ಪೂರ್ಣಗೊಂಡಿದ್ದು, ಒಟ್ಟಾರೆ 8903 ಹೆ.ನಲ್ಲಿ 8729 ಹೆ. ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಬಾಕಿ ಕಾಮಗಾರಿ ಪ್ರಗತಿಯಲ್ಲಿದೆ.

**78. ಬೋರಿ ಏತ ನೀರಾವರಿ ಯೋಜನೆ:**

ಕಲಬುರಗಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಕ್ಷೀಣಿಸುತ್ತಿದ್ದು, ಇದರಿಂದಾಗಿ ಕೊಳವೆಬಾವಿಗಳಲ್ಲಿ, ತೆರೆದ ಬಾವಿಗಳಲ್ಲಿ ಹಾಗೂ ಕೆರೆಗಳಲ್ಲಿ ನೀರಿನ ಪ್ರಮಾಣವು ಕಡಿಮೆಯಾಗಿದ್ದು ಅಂತರ್ ಜಲ ಮಟ್ಟವು ಕುಸಿದಿರುತ್ತದೆ. ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕು ಮತ್ತು ಅಫಜಲ್‌ಪುರ್ ತಾಲ್ಲೂಕಿನಲ್ಲಿ ಇದರ ತೀವ್ರತೆ ಹೆಚ್ಚಾಗಿದ್ದು, ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭೀಮಾ ನದಿಯ ಉಪನದಿಯಾದ ಬೋರಿ ನದಿಯಿಂದ 1.00 ಟಿ.ಎಂ.ಸಿ. ನೀರನ್ನು ಎತ್ತಿ ಅಫಜಲ್‌ಪುರ ತಾಲ್ಲೂಕಿನ 10 ಕೆರೆಗಳು ಹಾಗೂ ಅಳಂದ ತಾಲ್ಲೂಕಿನ 3 ಕೆರೆಗಳಿಗೆ ಅವುಗಳ ಸಾಮರ್ಥ್ಯದ ಶೇ.50 ರಷ್ಟು ತುಂಬಿಸ ಹಾಗು ಅಮರ್ಜಾ ಜಲಾಶಯ ಒಳಹರಿವಿನ ಕೊರತೆಯನ್ನು 60% ಸರಿದೂಗಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

**79. ಕಾರಂಜಾ ಯೋಜನೆ:**

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ಇರುತ್ತದೆ. ಸದರಿ ಯೋಜನೆಯಿಂದ ಬಿದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29227 ಹೆ. ನೀರಾವರಿ ಕಲ್ಪಿಸಲು ಉದ್ದೇಶಿಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

**80. ಕಾರಂಜಾ ಯೋಜನೆಯ ನಾಲೆಗಳ ಆಧುನೀಕರಣ**

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ನಿರ್ಮಿಸಲಾಗಿದೆ. ಸದರಿ ಯೋಜನೆಯಿಂದ ಬಿದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29227ಹೆ ಭೂ ಪ್ರದೇಶಕ್ಕೆ ನೀರಾವರಿ ಸೌಲಭ್ಯಾ ಕಲ್ಪಿಸಲು ಉದ್ದೇಶಿಲಾಗಿರುತ್ತದೆ. ಮುಖ್ಯ ಕಾಲುವೆ ಹಾಗೂ ವಿತರಣಾ ಕಾಲುವೆಗಳನ್ನು ಸುಮಾರು 30 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣ ಕಾಲುವೆಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಆದ್ದರಿಂದ ಕಾಲುವೆಗಳ ಆಯ್ದ ಭಾಗಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು ಪ್ರಸ್ತುತ ಕಾಮಗಾರಿ ಗುತ್ತಿಗೆಯನ್ನು ವಹಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

**81. ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ.60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (ಣಹಿಹಿಟುಟಜಟಣಚಿಟ) ಯೋಜನೆ**

ಕಾರಂಜಾ ನೀರಾವರಿ ಯೋಜನೆಯು ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಹತ್ತಿರ ನಿರ್ಮಿಸಲಾಗಿರುತ್ತದೆ. ಸದರಿ ಯೋಜನೆಯಿಂದ ಬಿದರ್ ಜಿಲ್ಲೆಯ ಬಾಲ್ಕಿ, ಬೀದರ್, ಹುಮ್ನಾಬಾದ್ ತಾಲ್ಲೂಕುಗಳ 29227 ಹೆ. ನೀರಾವರಿ ಕಲ್ಪಿಸಲು ಉದ್ದೇಶಿಲಾಗಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.

ಮುಂದುವರೆದು ಕಾರಂಜಾ ಜಲಾಶಯದ ಒಳಹರಿವಿನ ಕೊರತೆಯನ್ನು ಸರಿದೂಗಿಸಲು ಬಲದಂಡೆ ಕಾಲುವೆ ಕಿ.ಮೀ.60 ಮತ್ತು 90 ರಲ್ಲಿ ಮಾಣಿಕೇಶ್ವರ ಮತ್ತು ಹಾಲಹಳ್ಳಿ ಬ್ಯಾರೇಜ್‌ನಿಂದ ನೀರನ್ನು ಒದಗಿಸಿ ಅಚ್ಚುಕಟ್ಟನ್ನು ಸ್ಥಿರೀಕರಿಸುವ (ಣಹಿಹಿಟುಟಜಟಣಚಿಟ) ಯೋಜನೆಗೆ ಸರ್ಕಾರದಿಂದ ಸೆಪ್ಟೆಂಬರ್–2017ರಲ್ಲಿ ರೂ.126.85 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲಿವೆ.

**82. ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಆಧುನೀಕರಣ**

ಮುಲ್ಲಾಮಾರಿ ಮೇಲ್ದಂಡೆ ಯೋಜನೆಯಡಿ ಮುಲ್ಲಾಮಾರಿ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿದ್ದು, ಸದರಿ ಯೋಜನೆಯಿಂದ ಬೀದರ್ ಹಾಗು ಕಲಬುರಗಿ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ, ಕಲಬುರಗಿ ತಾಲ್ಲೂಕಿನ 3279ಹೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಸದರಿ ಯೋಜನೆಯು ಬಹಳ ಹಿಂದೆಯೆ ಪೂರ್ಣಗೊಂಡಿರುತ್ತದೆ. ಯೋಜನೆಯ ಮುಖ್ಯ ಕಾಲುವೆಯು ಸುಮಾರು 30 ವರ್ಷಗಳ ಹಿಂದೆ ನಿರ್ಮಿಸಿದ್ದು, ಕಾಲ ಕ್ರಮೇಣವಾಗಿ ಕೆಲವೊಂದು ಕಾಲುವೆ ಭಾಗಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಆದ್ದರಿಂದ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಕಾಲುವೆ ಜಾಲದ ಆಧುನೀಕರಣ ಕಾಮಗಾರಿಗಳನ್ನು ರೂ.68.60 ಕೋಟಿ ಮೊತ್ತದಲ್ಲಿ ಕೈಗೆತ್ತಿಕೊಂಡಿದ್ದು ಪ್ರಸ್ತುತ ಕಾಮಗಾರಿಗಳು ಪ್ರಗತಿಯಲಿವೆ.

**83. ಬಸವಕಲ್ಯಾಣ ತಾಲ್ಲೂಕಿನ ಕೊಂಗಳಿ ಬ್ಯಾರೇಜಿನಿಂದ ನೀರನ್ನು ಎತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಕೆರೆಗಳನ್ನು ತುಂಬಿಸುವ ಯೋಜನೆ**

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಜಮಖಂಡಿ ಗ್ರಾಮದ ಹತ್ತಿರ ಇರುವ ಕೊಂಗಳಿ ಬ್ಯಾರೇಜಿನಿಂದ ನೀರನ್ನೆತ್ತಿ ಚುಲ್ಕಿನಾಲಾ ಜಲಾಶಯ ಮತ್ತು ಬಸವಕಲ್ಯಾಣ ತಾಲ್ಲೂಕಿನ 15 ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆಯನ್ನು ಪ್ರಸ್ತಾಪಿಸಲಾಗಿದೆ. ಸದರಿ ಯೋಜನೆಯಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಮರುಪೂರಣಗೊಳಿಸಲು ಉದ್ದೇಶಿಸಲಾಗಿದೆ. ಚುಲ್ಕಿನಾಲ ಯೋಜನೆಯಿಂದ ಒಟ್ಟು 4047 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಜಿಸಲಾಗಿರುತ್ತದೆ. ಆದರೆ, ಒಳಹರಿವಿನ ಅಭಾವದಿಂದ ವಂಚಿತ ನೀರಾವರಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸ್ಥಿರೀಕರಿಸಲು ಯೋಜಿಸಲಾಗಿದೆ. ಈ ಯೋಜನೆಗೆ 0.768 ಟಿ.ಎಂ.ಸಿ ನೀರಿನ ಅವಶ್ಯಕತೆಯಿದ್ದು ಮಾಂಜ್ರಾ ನದಿಯಿಂದ ನೀರನ್ನೆತ್ತಿ ಚುಲ್ಕಿನಾಲಾ ಜಲಾಶಯ ಮತ್ತು 15 ಕೆರೆಗಳಿಗೆ ನೀರು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.188.00

ಕೋಟಿಗಳ ಮೊತ್ತದ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲಿವೆ.

**84. ತುಂಗಭದ್ರಾ ನಾಲಾ ಜಾಲದ ಆಧುನಿಕರಣ**

ಈ ಯೋಜನೆಯು ಅಂತರರಾಜ್ಯ ವಿವಿಧೋದ್ದೇಶ ಯೋಜನೆಯಾಗಿದ್ದು, ತುಂಗಭದ್ರಾ ಆಣೆಕಟ್ಟೆಯನ್ನು ತುಂಗಭದ್ರಾ ನದಿಗೆ ಅಡ್ಡಲಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮಲ್ಲಾಪುರ ಹತ್ತಿರ ಕಟ್ಟಲಾಗಿದೆ. ಇದು ಕೃಷ್ಣಾ ನದಿಯ ಉಪನದಿಯಾಗಿದೆ. ಈ ಯೋಜನೆಯ ಎರಡು ಬದಿಯ ಕಾಲುವೆಗಳಿಂದ ಕರ್ನಾಟಕ ರಾಜ್ಯದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ 3,62,938 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದ್ದು, ನಿಗದಿತ ನೀರಿನ ಬಳಕೆಯ ಪ್ರಮಾಣ 3736 ದಶಲಕ್ಷ ಘನ ಮೀಟರ್ ಆಗಿರುತ್ತದೆ. ಈಗ ಇದು ಎರಡು ರಾಜ್ಯ ಸರ್ಕಾರಗಳ (ಆಂಧ್ರ ಪ್ರದೇಶ ಮತ್ತು ಕರ್ನಾಟಕ) ಜಂಟಿ ಯೋಜನೆಯಾಗಿದೆ. ಈ ಯೋಜನೆಯ ಅಣೆಕಟ್ಟು ಮತ್ತು ಕಾಲುವೆಗಳ ಕೆಲಸಗಳು ಪೂರ್ಣಗೊಂಡಿದೆ. ತುಂಗಭದ್ರಾ ಎಡದಂಡೆ ಕಾಲುವೆಯ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

**85. ಹಿರೇಹಳ್ಳ ಯೋಜನೆ**

ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದ ಹತ್ತಿರ ತುಂಗಭದ್ರಾ ನದಿಯ ಉಪ ನದಿಯಾದ ಹಿರೇಹಳ್ಳಕ್ಕೆ ಅಣೆಕಟ್ಟನ್ನು ಕಟ್ಟಿ ಜಲಾಶಯ ನಿರ್ಮಿಸಲಾಗಿದೆ. ಈ ಯೋಜನೆಯಿಂದ ಕೊಪ್ಪಳ ತಾಲ್ಲೂಕಿನ 8330 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಯೋಜನೆಯ ಅಣೆಕಟ್ಟು, ಕಾಲುವೆ ಹಾಗೂ ಎಲ್ಲಾ ವಿತರಣಾ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಪುನರ್ವಸತಿ ಕಾಮಗಾರಿಗಳು ಪ್ರಗತಿಯಲ್ಲಿವೆ.

**86. ಸಿಂಗಟಾಲೂರು ಏತ ನೀರಾವರಿ ಯೋಜನೆ**

ಸಿಂಗಟಾಲೂರು ಏತ ನೀರಾವರಿ ಯೋಜನೆಯಲ್ಲಿ ಬಳ್ಳಾರಿ, ಕೊಪ್ಪಳ ಮತ್ತು ಗದಗ ಜಿಲ್ಲೆಗಳ ಹೂವಿನಹಡಗಲಿ, ಕೊಪ್ಪಳ, ಯಲಬುರ್ಗ, ಗದಗ, ಮುಂಡರಗಿ ತಾಲ್ಲೂಕಿನ 107380 ಹೆ (19,587 ಹೆ.ಪ್ರದೇಶಕ್ಕೆ ಹರಿ ನೀರಾವರಿ ಹಾಗೂ 87,793 ಹೆ.ಪ್ರದೇಶಕ್ಕೆ ಹನಿ ನೀರಾವರಿ ಮುಖಾಂತರ) ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ.ಬ್ಯಾರೇಜ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಬಲದಂಡೆ ಕಾಲುವೆಯು 40.13 ಕಿ.ಮಿ ಉದ್ದ ಇದ್ದು, ಕಾಲುವೆಯ ನಿರ್ಮಾಣದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಎಡದಂಡೆ ಕಾಲುವೆಯ ಒಟ್ಟಾರೆ 166.44.ಕಿ.ಮಿ ಉದ್ದ ಇದ್ದು, ಭಾಗಶಃ ಎಡದಂಡೆ ಯೋಜನೆಯ 71074 ಹೆ. ಅಚ್ಚಕಟ್ಟು ಕ್ಷೇತ್ರಕ್ಕೆ ಸೂಕ್ಷ್ಮ ನೀರಾವರಿ ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿವೆ.

**87. ಒಳ ಬಳ್ಳಾರಿ ಏತ ನೀರಾವರಿ ಯೋಜನೆ**

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಒಳಬಳ್ಳಾರಿ ಏತ ನೀರಾವರಿ ಯೋಜನೆಯನ್ನು ತುಂಗಭದ್ರಾ ಯೋಜನೆಯಿಂದ ವಂಚಿತರಾಗಿ ತೊಂದರೆಗೆ ಒಳಗಾಗಿರುವ ಕೊನೆಯ ಅಂಚಿನ ಸುಮಾರು 2542 ಹೆ ಪ್ರದೇಶಕ್ಕೆ ನೀರನ್ನು ಒದಗಿಸುವ ಸಲುವಾಗಿ ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

**88. ವಿಜಯನಗರ ಕಾಲುವೆ ಜಾಲದ ಆಧುನೀಕರಣ**

ವಿಜಯನಗರ ಕಾಲುವೆಗಳು ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನಿರ್ಮಾಣಗೊಂಡ ಕಾಲುವೆಗಳಾಗಿರುತ್ತವೆ. ಸದರಿ ಯೋಜನೆಯಿಂದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಹೊಸಪೇಟೆ, ಬಳ್ಳಾರಿ, ಶಿರಗುಪ್ಪ, ಗಂಗಾವತಿ, ಕೊಪ್ಪಳ ಮತ್ತು ಮಾನ್ವಿ ತಾಲ್ಲೂಕುಗಳ ಸುಮಾರು 11,222 ಹೆ. ಪ್ರದೇಶಕ್ಕೆ ನೀರಾವರಿ ಒದಗಿಸಲಾಗುತ್ತಿದೆ. ಯೋಜನೆಯ ರೂ. 456.63 ಕೋಟಿಗಳ ಪರಿಷ್ಕೃತ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಸದರಿ ಕಾಲುವೆಗಳ ಆಧುನೀಕರಣವನ್ನು ಏಷಿಯನ್ ಡೆವಲೆಂಪಮೆಂಟ್ ಬ್ಯಾಂಕ್‌ನ ಆರ್ಥಿಕ ಧನಸಹಾಯದಲ್ಲಿ ಕೈಗೆತ್ತಿಕೊಂಡ್ಡು ಕಾಮಗಾರಿಗಳು ಪ್ರಗತಿಯಲ್ಲಿವೆ.

**89. ರಾಜೋಳಿಬಂಡಾ ಯೋಜನೆ**

ಈ ಯೋಜನೆಯು ತುಂಗಭದ್ರಾ ಜಲಾಶಯದ ಕೆಳಭಾಗದ ಜಲಾನಯನ ಪ್ರದೇಶದಿಂದ ಹಾಗೂ ತುಂಗಭದ್ರಾ ಯೋಜನೆಯ ಪುನರ್‌ಉತ್ಪತ್ತಿ ನೀರಿನಿಂದ ಲಭ್ಯವಾಗುವ ನೀರನ್ನು ಉಪಯೋಗಿಸಿ 2380 ಹೆ. ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ. ಸದರಿ ಯೋಜನೆ ಪೂರ್ಣಗೊಂಡಿದ್ದು, ಆಧುನೀಕರಣ ಕಾಮಗಾರಿ ಪ್ರಗತಿಯಲ್ಲಿದೆ.

**90. ತುಂಗಭದ್ರಾ ನದಿಯಿಂದ ಹೂವಿನಹಡಗಲಿ ತಾಲೂಕಿನಲ್ಲಿ ಬರುವ 10 ಕೆರೆಗಳಿಗೆ ನೀರು ತುಂಬಿಸುವ ಯೋಜನೆ:**

ಹೂವಿನಹಡಗಲಿ ವಿಧಾನ ಸಭಾ ಕ್ಷೇತ್ರದ 10 ಕೆರೆಗಳಿಗೆ ತುಂಗಭದ್ರಾ ಜಲಾಶಯದ ಮೇಲ್ಭಾಗದ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಯನ್ನು ಟೆಂಡರ್ ಮೂಲಕ ಟರ್ನ್‌ಕೀ ಆಧಾರದ ಮೇಲೆ ವಹಿಸಲಾಗಿದ್ದು, ಕಾಮಗಾರಿ ಪೂರ್ಣಗೊಂಡಿರುತ್ತದೆ..

**91. ಅಳವಂಡಿ–ಬೆಟಗೇರಿ ಏತ ನೀರಾವರಿ ಯೋಜನೆ**

ಕೊಪ್ಪಳ ತಾಲ್ಲೂಕಿನ ಬರ ಪೀಡಿತ ಪ್ರದೇಶಗಳ ಸುಮಾರು 5992.30 ಎಕರೆ ಭೂಮಿಗೆ ಕಾಲುವೆ ಮುಖಾಂತರ ನೀರಾವರಿ ಕಲ್ಪಿಸಲು ಉದ್ದೇಶಿಸಿದ್ದು, ಈಗಾಗಲೇ ರೂ.87.10 ಕೋಟಿಗಳ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಸದರಿ ಯೋಜನೆಯ ಹೆಡ್‌ವರ್ಕ್ ಹಾಗು ಕಾಲುವೆ ಜಾಲದ ಕಾಮಗಾರಿಗಳು ಪ್ರಗತಿಯಲ್ಲಿವೆ.

**92. ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲ್ವಿ ಜಲಾಶಯಕ್ಕೆ ತುಂಗಭದ್ರಾ ನದಿಯಿಂದ ಏತ ನೀರಾವರಿ ಮೂಲಕ ನೀರನ್ನು ತುಂಬಿಸುವ ಯೋಜನೆ**

ಹಗರಿಬೊಮ್ಮನಹಳ್ಳಿ ನೀರಾವರಿ ಯೋಜನೆಯನ್ನು ಚಿಕ್ಕ ಹಗರಿ ನದಿಗೆ ಅಡ್ಡಲಾಗಿ ಮಾಲವಿ ಗ್ರಾಮದ ಬಳಿ 1972ರಲ್ಲಿ ಆಣೆಕಟ್ಟು ನಿರ್ಮಾಣ ಮಾಡಿದ್ದು, ಸುಮಾರು 2965 ಹೆಕ್ಟೇರ್ ಪ್ರದೇಶಕ್ಕೆ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಜಮೀನುಗಳಿಗೆ ನೀರು ಒದಗಿಸಲು ಯೋಜಿಸಲಾಗಿರುತ್ತದೆ. ಸದರಿ ಜಲಾಶಯದಿಂದ 1972ರಿಂದ 1980ರ ಸಾಲಿನವರೆಗೆ ಸತತವಾಗಿ ಎರಡು ಹಂಗಾಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ತದನಂತರ ಜಲಾನಯನ ಪ್ರದೇಶದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿ ಹಾಗೂ ಜಲಾಶಯದ ಮೇಲ್ಭಾಗದಲ್ಲಿ (ಛಿಚಿಣಛಿhಟಜಟಿಣ) ಸಣ್ಣ ಕೆರೆಗಳು ನಿರ್ಮಾಣವಾಗಿರುವುದರಿಂದ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಸಂಗ್ರಹಣೆ ಆಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಮಾಲ್ವಿ ಜಲಾಶಯದ ಒಳ ಹರಿವಿನಲ್ಲಿ ಉಂಟಾದ ನೀರಿನ ಕೊರತೆಯನ್ನು ನೀಗಿಸಲು ತುಂಗಭದ್ರಾ ನದಿಯಿಂದ ನೀರನ್ನು ಎತ್ತಿ ಮಾಲ್ವಿ ಜಲಾಶಯಕ್ಕೆ ಪೈಪ್ ಮೂಲಕ ಹರಿಸುವ ರೂ.144.95 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**93. ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಇಟಗಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ 20 ಇಂಗು ಕೆರೆಗಳಿಗೆ ನೀರನ್ನು ತುಂಬಿಸುವ ಯೋಜನೆ:**

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನಲ್ಲಿನ ಕೆರೆಗಳು ಒಳಹರಿವಿನ ಕೊರತೆಯಿಂದ ತುಂಬದ ಕಾರಣ ಜನ–ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಹಾಗೂ ಅಂತರ್ಜಲ ಮಟ್ಟವು ಕುಸಿದು ತೀವ್ರ ಸಂಕಷ್ಟವನ್ನು ಅನುಭವಿಸುತ್ತಿರುವುದರಿಂದ ಇಟಗಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ 0.226 ಟಿ.ಎಂ.ಸಿ. ನೀರನ್ನೆತ್ತಿ 20 ಇಂಗು ಕೆರೆಗಳಿಗೆ ನೀರನ್ನು ತುಂಬಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.140.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**94. ತಿಮ್ಮಾಪುರ ಏತ ನೀರಾವರಿ**

ತುಂಗಭದ್ರಾ ಎಡದಂಡೆ ಕಾಲುವೆಯ ವಿತರಣಾ ಕಾಲುವೆ – 54 ರಡಿ ಭಾದಿತವಾದ 34,948 ಎಕರೆ ನೀರಾವರಿ ಪ್ರದೇಶವನ್ನು, ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕಿನ ತುರಕಟ್ಟಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನು ಎತ್ತಿ ಸ್ಥಿರಗೊಳಿಸಲು (ಣಚಿಟಿಟಿಜಿಚಿಟಿಂ) ತಿಮ್ಮಾಪುರ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯ ಭಾದಿತ ಅಚ್ಚುಕಟ್ಟಿನ ಪೈಕಿ 11687 ಎಕರೆ ಪ್ರದೇಶವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಾಂಗಕ್ಕೆ ಸೇರಿರುತ್ತದೆ. ಸದರಿ ಯೋಜನೆಯ ರೂ.92.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**95. ಕರಡೋಣ ಮತ್ತು ರಾಮದುರ್ಗ ಕೆರೆಗಳನ್ನು ತುಂಬಿಸುವ ಯೋಜನೆ**

ಗಂಗಾವತಿ ತಾಲ್ಲೂಕಿನ ಕನಕಗಿರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳ್ಳಲ್ಲಿ ಮಳೆಯ ಆಭಾವದಿಂದ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು ಸದರಿ ನೀರಿನ ಭವಣೆಯನ್ನು ನೀಗಿಸಲು ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸದರಿ ಯೋಜನೆಯಡಿ ತುಂಗಭದ್ರಾ ಜಲಾಶಯದ ಕೆಳಭಾಗದಲ್ಲಿ ಈಗಾಗಲೆ ಸಣ್ಣ ನೀರಾವರಿ ಇಲಾಖೆಯಿಂದ ಪೂರ್ಣಗೊಳಿಸಲಾಗಿರುವ ದೇವಲಾಪುರ ಮತ್ತು ಇತರೆ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯಿಂದ ಕರಡೋಣ, ಶೀರವಾರ, ರಾಮದುರ್ಗ ಮತ್ತು ಹೊಸಕೆರೆ ಕೆರೆಗಳನ್ನು ಅವುಗಳ ಶೇಖರಣಾ ಸಾಮರ್ಥ್ಯದ ಶೇ.50ರಷ್ಟು ನೀರನ್ನು ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.15.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**96. ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆ**

ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಬಹದ್ದೂರ್ ಬಂಡಿ ಮತ್ತು ಇತರೆ 18 ಗ್ರಾಮಗಳ ವ್ಯಾಪ್ತಿಯಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದು ರೈತರನ್ನು ಆರ್ಥಿಕವಾಗಿ ಸಧೃಡಗೊಳಿಸುವ ಸಲುವಾಗಿ ಅಲ್ಲಿನ 5256.00 ಹೆ. ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಹಿನ್ನೆಲೆಯಲ್ಲಿ ತುಂಗಭದ್ರಾ ಉಪಕೊಳ್ಳದಲ್ಲಿನ 0.6 ಟಿಎಂಸಿ ನೀರನ್ನು ಬಳಸಿಕೊಂಡು ರೂ. 188.41 ಕೋಟಿಗಳ ಮೊತ್ತದ 2 ಹಂತಗಳ ಬಹದ್ದೂರ್ ಬಂಡಿ ಏತ ನೀರಾವರಿ ಯೋಜನೆಯಿಂದ ರೈತರ ಬವಣೆಯನ್ನು ನೀಗಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.80.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಗಳು ಪ್ರಗತಿಯಲ್ಲಿವೆ.

**97. ರಾಯಚೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಕೃಷ್ಣಾ ನದಿಯಿಂದ ಗಣೇಕಲ್ ಸಮತೋಲನ ಜಲಾಶಯಕ್ಕೆ ನೀರು ಪೂರೈಸುವ ಯೋಜನೆ:**

ರಾಯಚೂರು ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ ಮೈಲ್-109 ರಲ್ಲಿಯ 0.745 ಟಿ.ಎಂ.ಸಿ. ಸಂಗ್ರಹಣಾ ಸಾಮರ್ಥ್ಯವುಳ್ಳ ಗಣೇಕಲ್ ಸಮತೋಲನಾ ಜಲಾಶಯಕ್ಕೆ ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆ ಮೈಲ್-104 ರಿಂದ ಸದರಿ ಜಲಾಶಯವನ್ನು ತುಂಬಿಸಲಾಗುತ್ತಿದೆ. ಹೂಳಿನಿಂದಾಗಿ ತುಂಗಭದ್ರಾ ಜಲಾಶಯದ ಸಂಗ್ರಹಣಾ ಸಾಮರ್ಥ್ಯದಲ್ಲಿ ನೀರಿನ ಕೊರತೆಯಿಂದ, ಜಲಾಶಯದ ಕೆಳಭಾಗದಲ್ಲಿ ಬರುವ ರಾಯಚೂರು ನಗರ ಹಾಗೂ ಸುತ್ತ ಮುತ್ತಲಿನ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆಯಾಗಿದ್ದು, ಸದರಿ ನೀರಿನ ಬವಣೆಯನ್ನು ನೀಗಿಸಲು ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಗೂಗಲ್ ಬ್ರಿಡ್ಜ್ ಕಂ ಬ್ಯಾರೇಜ್‌ನಿಂದ ಗಣೇಕಲ್ ಸಮತೋಲನಾ ಜಲಾಶಯಕ್ಕೆ ನೀರನ್ನು ತುಂಬಿಸಲು ಉದ್ದೇಶಿಸಲಾಗಿದೆ. ಸದರಿ ಯೋಜನೆಯ ರೂ.189.22 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

**98. ಹೊಸಪೇಟೆ ತಾಲ್ಲೂಕು ವ್ಯಾಪ್ತಿಯ 21 ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಹಾಗೂ 13 ಕೆರೆಗಳನ್ನು ತುಂಬಿಸುವ ಯೋಜನೆ:**

ಹೊಸಪೇಟೆ ತಾಲ್ಲೂಕಿನ ಸುತ್ತಮುತ್ತಲು ಗಣಿಗಾರಿಕೆಯಿಂದ ಬಾಧಿತವಾಗಿರುವ ಗ್ರಾಮಗಳಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವವನ್ನು ನೀಗಿಸಲು ಹೊಸಪೇಟೆ ತಾಲ್ಲೂಕು ವ್ಯಾಪ್ತಿಯ 18 ಕೆರೆಗಳನ್ನು (3 ಇಂಗು ಕೆರೆಗಳನ್ನೊಳಗೊಂಡಂತೆ), 4 ಸರಣಿ ಚೆಕ್‌ಡ್ಯಾಂಗಳನ್ನು ತುಂಬಿಸಲು ಹಾಗೂ 19 ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಬೃಹತ್ ಸಂಗ್ರಹಗಾರಗಳನ್ನು ನಿರ್ಮಿಸಲು ಸದರಿ ಯೋಜನೆಯಿಂದ ಉದ್ದೇಶಿಸಲಾಗಿದೆ. ಸದರಿ ಯೋಜನೆಯಡಿ ಹೊಸಪೇಟೆ ತಾಲ್ಲೂಕಿನ ಆನೆಗುಂದಿ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ಮಳೆಗಾಲದ 3 ತಿಂಗಳ ಅವಧಿಯಲ್ಲಿ 0.223 ಟಿ.ಎಂ.ಸಿ. ನೀರನ್ನೆತ್ತಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.243.35 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

**99. ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿನ ಬನ್ನಿಕೊಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಗ್ನಳ್ಳಿ ಗ್ರಾಮದ ಆಲದಮ್ಮನ ಕೆರೆಯನ್ನು ತುಂಬಿಸುವ ಯೋಜನೆ:**

ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿನ ಸುಗ್ನಳ್ಳಿ ಗ್ರಾಮದ ಆಲದಮ್ಮನ ಕೆರೆಯನ್ನು ಹಾಗೂ ಬನ್ನಿಕೊಪ್ಪ ಗ್ರಾಮದ ಕೆರೆಗಳು ಮಳೆಯ ಅಭಾವದಿಂದ ಭರ್ತಿಯಾಗದೇ ಇರುವುದರಿಂದ ಸದರಿ ಕೆರೆಗಳನ್ನು ತುಂಗಭದ್ರಾ ನದಿಯಿಂದ ನೀರನ್ನೆತ್ತಿ ತುಂಬಿಸಲು ಯೋಜಿಸಲಾಗಿದೆ. ಸದರಿ ಯೋಜನೆಯ ರೂ.10.00 ಕೋಟಿಗಳ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ದೊರೆತ್ತಿದ್ದು, ಪ್ರಸ್ತುತ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

* * * * * * *